ಶ್ರೀ ಎಮ್. ಎಸ್. ಕೃಷ್ಣನ್.—ರೂಲ್ ನಂಬರ್ ೩೧೯ರ ಪ್ರಕಾರ ಶ್ರೀಮಾನ್ ಸೈನಕ್‌ರವರನ್ನು ತಾವು ಸಸ್ಪೆಂಡ್ ಮಾಡಿದ್ದೀರಿ. ಮತ್ತು ೩೦೮ ರೂಲ್ ಪ್ರಕಾರ ಶ್ರೀಮಾನ್ ವಾಟಾಳ್ ನಾಗರಾಜ್ ಅವರನ್ನು ವಿತ್ ಡ್ರಾ ಮಾಡಿ ಎಂದು ಹೇಳಿದ್ದೀರಿ. ಸೈನಕ್‌ರವರು ಹೊರಗೆ ಹೋಗಿದ್ದಾರೆ. ಇನ್ನೂ ವಾತಾವರಣ ಕಹಿ ಆಗುವ ಪರಿಸ್ಥಿತಿ ಇತ್ತು. ಹಿಂದೆ ಈ ತರಹ ಪ್ರಶ್ನೆ ಬಂದಾಗ, ಯಾವ ಮೆಂಬರನ್ನು ಮಾರ್‌ಷಲ್ ಬಂದು ಹೊರಗೆ ಹಾಕುವ ಪರಿಸ್ಥಿತಿ ಬಂದಿರಲಿಲ್ಲ ಇವೊತ್ತಿನದ್ದು ಮಾರ್‌ಷಲ್‌ನ್ನು ಕರೆದು ಎತ್ತಿ ಹಾಕುವ ವಿಚಾರ ಆಗಿರಲಿಲ್ಲ, ಅದರಿಂದ ಸಭೆಯ ಘನತೆ, ಗೌರವಕ್ಕೆ ಚ್ಯುತಿ ಬರಬಹುದು. ಆದ್ದರಿಂದ ಅದು ಸರಿಯಾದುದು ಅಲ್ಲ. ನಾನು ಸಹ ತಮಗೆ ಗೊತ್ತಿರುವ ಹಾಗೆ ಕೇಳಿಕೊಂಡೆ, ಬೇರೆಯವರು ಕೇಳಿಕೊಂಡರು. ಆದರೂ ಹೊರಗೆ ಹಾಕಿದ್ದೀರಿ, ಇದರಲ್ಲಿ ತಾವಾದರೂ ಬಿಟ್ಟುಕೊಡಬಹುದಿತ್ತು ಮಂತ್ರಿಗಳು ಆದರೂ ಬಿಟ್ಟು ಕೊಡಬಹುದಿತ್ತು. ಇದೇ ಭಾಷೆಯಲ್ಲಿ ಮಾತನಾಡುತ್ತೇನೆ. ಬೇರೆ ಭಾಷೆಯಲ್ಲಿ ಮಾತನಾಡ ವುದಿಲ್ಲ ಎಂದು ಹಠ ಹಿಡಿಯಬಾರದಿತ್ತು. ಕನ್ನಡದಲ್ಲಿ ಮಾತನಾಡುವುದರಲ್ಲಿ ಭಿನ್ನಾಭಿಪ್ರಾಯ ವಿಲ್ಲ. ಮೆಂಬರ ಗಳಿಗೆ ಭಾಷೆ ಅರ್ಥವಾಗದೆ ಹೋದರೆ ಅವರಿಗೆ ಅಕಾಮಡೇಟ್ ಮಾಡಬಹುದಿತ್ತು. ಇದು ನನ್ನ ಸ್ವಂತ ಅಭಿಪ್ರಾಯ. ಇದರಿಂದ ಕನ್ನಡಕ್ಕೆ ಅವಮಾನವಾಗುತ್ತಾ ಇರಲಿಲ್ಲ. ಈಗ ಈ ರೀತಿ ನಡೆದು ಹೋಯಿತು-ರೂಲ್ ೩೧೯ ಪ್ರಕಾರ ತಮ್ಮ ಅಧಿಕಾರವನ್ನು ಚಲಾವಣೆ ಮಾಡಿ ಸಸ್ಪೆನ್‌ಷನ್ ಟರ್ಮಿನೇಟ್ ಮಾಡಿ ಶ್ರೀಮಾನ್ ಸೈನಕ್‌ರವರನ್ನು ಮತ್ತು ಶ್ರೀಮಾನ್ ವಾಟಾಳ್ ನಾಗರಾಜ್‌ರನ್ನು ಒಳಗಡೆ ಬರುವುದಕ್ಕೆ ಪರ್ಮಿಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

MADAM SPEAKER.—Let the Hon. Member write an apology letter and I will consider it.

SRI M.S. KRISHNAN.—Is it necessary to insist on an apology letter?

MADAM SPEAKER.—Does the Hon. Member want me to pocket certain charges made against me?

SRI K.H. PATIL (Minister for Agriculture and Forests).—Madam, the conduct of the Hon. Member was of such a grave character that it warranted the action that has been taken against him. The resolution has been passed just now and there must be something to reconsider it. There must be something to reconsider the resolution and as has been rightly suggested by the Hon. Speaker there must be an apology letter from the member concerned.

SRI M.S. KRISHNAN.—I am really surprised that the Hon. Minister Sri K H. Patil should say this. He was mainly instrumental when he was on this side of the House to see that gheraos were done and for three days the former Speaker Sri Kothavale was gheraoed.

ಅಧ್ಯಕ್ಷರು:—ಅವರು ಕಾಗದ ಬರೆಯಲಿ, ನೋಡೋಣ.

MYSORE SALES TAX (AMENDMENT) BILL, 1972.

Motion to Consider

SRI M. Y. GHORPADE (Minister for Finance).—Madam, I beg to move—

"That the Mysore Sales Tax (Amendment) Bill, 1972 be taken into consideration".

MADAM SPEAKER.—Motion moved.

"That the Mysore Sales (Amendment) Bill, 1972 be taken into consideration".

‡ SRI M. Y. GHORPADE.—Madam Speaker, this is an amendment to the Sales Tax Act which is in pursuance of what was stated in the Budget speech regarding rationalisation of composition rates. While doing this we have taken advantage of the opportunity to remove certain difficulties and tighten up procedure in sales tax collection. If the Hon. members desire, I will give the main idea behind each one of these amendments.

The first amendment is simply to change the multi-point tax from 3% to 3.5% as announced in the Budget. Then, there is a proviso added to clause (a) of sub-section (3) of section 5. The intention of adding this proviso is to shift the single point tax on the sale of liquor from the point of manufacturer to the bonded warehouse. What used to happen is, if the sales tax is at the point of sale by the manufacturer then that price on which the sales tax is levied would not include excise duty because manufacturers sold it to be bonded warehouses. If it was sold to wholesalers there was no problem. But if it were sold to bonded warehouses, then the excise duty levied was not included. Therefore we have now shifted the single point tax on liquor sold by the bonded warehouses also so that sales tax on the excise duty is also included. Therefore the revenue we get from sales tax will increase. To give a concrete example, the excise duty as such is Rs. 135 on a particular unit when the cost of liquor is Rs. 60 so if the sales tax was on the sale by the manufacturer to the bonded house this Rs. 135 would not be included in the price. By shifting the point of tax for sale by the bonded warehouse it will be on price which includes excise duty, namely Rs. 135. Therefore for a particular unit the sales tax that the State Government would get would increase from Rs. 15 to Rs. 50 by merely shifting the point of tax. Let me explain again. The cost of liquor Rs. 60, (sales tax Rs. 15 transportation Rs. 3 octori Rs. 1 the total will be Rs. 79. Then the excise duty Rs. 135 total is Rs. 214. This is the present position. After the amendment it will be as follows:—

		Rs.
Cost of liquor	...	60
Transportation	...	3
Excise	...	135
Octroi	...	4
Total		202

and the sales tax will Rs. 50. The sales tax will be on Rs. 202 which includes excise duty of Rs. 135. So on the same liquor instead Rs. 15 will be getting Rs. 50 by merely shifting the single point tax on whole saler to the sale by the bonded warehouse as well.

A new sub section is added to section 12 (b) to make it obligatory on the part of dealer to pay the tax when the return is filed. This is only to improve the working so that when the return is filed every month it is made obligatory from him to pay proper tax. sub-section

(SRI M. Y. GOHRPADE)

1 of Section 12 (b) is suitably amended to make it obligatory on the part of dealer to pay the full amount of tax along with the monthly statement. This will enable the department to take action to recover full amount under section 13 by resorting to recovery proceedings. This is to prevent dealers from avoiding payment of full tax until the end of the year by paying every month less than what the turnover justifies. Though there is penalty when the final assessment is made at the end of the year, there is gross underestimation of the assessment. The position is, today for the dealer we have given some scope for self assessment. If he deliberately assesses lower than what he gets, till the end of the year he escapes payment of tax. Of course when the year ends, there is penalty but still this concession is resorted. The main idea is giving that concession was to see that there is no harassment to the dealer. If the difference between what he assesses and what actually is assessed at the end of the year is more than 15%, then there is penalty. In spite of that penalty we have found that a dealer grossly underestimates his assessment of turnover and thereby escapes payment of tax till the end of the year. So we are making it obligatory to make proper assessment every year and we are taking power to see if a dealer is found to deliberately under estimate his turnover, to go and check that practice without waiting till the end of the year.

Section 13 (3) authorises recovery of tax and other amount due by two modes. This is the present position. The two modes are to collect as arrears of land revenue or by an order of the magistrate as if it were a fine imposed by him. To expedite recovery provision has been made for third mode of recovery by the assessing authority or the officer to be prescribed by the rules as recommended by the Bhoothalingam Committee. In Tamilnadu they have authorised commercial tax officers to recover sales tax due under revenue recoveries. Here also it is proposed to give power to the sales tax officers to recover dues under Revenue Recoveries Act. This is the third mode of recovery.

Then Section 15 of the original Act did not provide for assessment of a firm after its dissolution. It is proposed to provide for assessment of the tax and imposition of penalty as if no dissolution has taken place and for assessment on Hindu undivided family or Aliyasanthana family after partition as if partion has not taken place. The Section was amended in 1964. The High Court has quashed a number of cases prior to 1964. Several cases are still pending for that period. Hence it is proposed to give retrospective effect to the provision and also to validate assessments already made for that period. This is not controversial.

Next we come to the rationalisation of composition of rates as mentioned in the Budget speech. As you all know there were only

two slabs the two sales were Rs. 25,000 to Rs. 50,000 and 50,000 to Turnover 75,000. below 25,000 were exampted. No where in any part of the country are composition of slabs so wide. Therefore to improve tax collection and also increase convenience to the tax payers we have made slabs of Rs. 10,000 each as recommended by the Bhoothalingam Committee and obtaining in the neighbouring States.

We have made five slabs, and therefore the Sales Tax Act is being amended in order to introduce these five slabs. Hon. member Sri T. R. Shamanna has sent an amendment. I am not able to make out what it is and I am unable to make sense out of it. We cannot have two slabs and therefore I request the hon. member to have a look at it. Afterwards I will try to reply him. This is merely rationalisation of the composition rates.

3-00 P. M.

In Section 21 (2) the words 'to him' are being delated. Previously the same Deputy Commissioner used to do appeal work and also revision work by calling for papers from junior officers. Now we want to have a separate Deputy Commissioner in charge of appeal work and a separate Deputy Commissioner in charge of revisional work. Therefore the wording of the clause has to be slightly modified to delete the words 'to him' so that it may not be mixed up with the old situation. In the old situation, the Deputy Commissioner was the same for both the works, which created an impression that the appellate authority also has revisional jurisdiction. This is a wrong impression, and now there are separate Deputy Commissioners for appeals and exercise of revisional powers. The amendment drops the wording 'to him' to make it clear that the Deputy Commissioner can exercise revisional powers though he is not the authority to hear appeals as was the case before. He is still entitled to exercise revisional powers.

Clause (f) to Section 29 (1) is considered necessary to provide for a sanction to ensure balance payment under sub-section (1) of Section 28, and hence this amendment is proposed. It also considered necessary to provide for sanction to ensure balance payment under sub-section (1) of Section 12 (b) relating to payment of advance tax. Hence it is proposed to amend sub-section (2) of section 29. Clause 13 is intended to validate action taken as things done in sections 16 and 20. All these amendments are proposed with the idea of giving retrospective effect to the rationalisation of the composition rates as mentioned in my budget speech in order to improve and tighten sales tax collections. I am sure the hon. members will support these amendments unanimously.

(MR. DEPUTY SPEAKER in the chair).

† ಶ್ರೀ ಟಿ. ಆರ್. ಶಾಮಣ್ಣ .—(ಕೋಟೆ) ಮಾನ್ಯ ಸಭಾಪತಿಯವರೇ, ಈ ದಿನ ನಮ್ಮ ಅರ್ಥ ಸಚಿವರು ನಮ್ಮ ಮುಂದೆ ಮಂಡಿಸಿರತಕ್ಕಂಥ ಮೈಸೂರು ಸೇಲ್ಸ್ ಟಾಕ್ಸ್ (ಅಮೆಂಡ್‌ಮೆಂಟ್) ಬಿಲ್ ೧೯೭೦ ಇದನ್ನು ಪೂರ್ಣವಾಗಿ ವಿರೋಧಿಸಬೇಕಾಗಿದೆ. ವಿರೋಧಿಸಬೇಕಾದರೆ ಕಾರಣ ಇಷ್ಟೆ, ನಮ್ಮ ರಾಜ್ಯಸರ್ಕಾರದ ಬೊಕ್ಕಸ ಬಕಾಸುರನ ಹೊಟ್ಟೆ ಇದ್ದ ಹಾಗೆ ಎಷ್ಟು ಬಂದರೂ ಬೇಕು ಬೇಕು ಎಂದು ಹೇಳುತ್ತಲೇ ಇರುತ್ತದೆ. ನಮ್ಮ ಸಚಿವರು ಈಗಿರುವ ವಿದ್ಯಮಾನಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಆದರೂ ತೆರಿಗೆಯನ್ನು ಜನ ಸಾಮಾನ್ಯರ ಮೇಲೆ ಹೇರುತ್ತಲೇ ಇದ್ದಾರೆ. ಇದರ ಜೊತೆಗೆ ಕೇಂದ್ರ ಸರ್ಕಾರದವರು ಸಹ ವರ್ಷಕ್ಕೆ ಎರಡು ಸಲ ತೆರಿಗೆಯನ್ನು ಹೇರುತ್ತಿದ್ದಾರೆ ಈಗ ನಮ್ಮ ದೇಶದಲ್ಲಿ ಹಣದುಬ್ಬರ ಜಾಸ್ತಿಯಾಗಿ ಸುಮಾರು ೪ ಸಾವಿರ ಚಿಲ್ಲರೆ ಕೋಟಿ ರೂಪಾಯಿಗಳಷ್ಟು ಹೆಚ್ಚು ನೋಟುಗಳು ಚಲಾವಣೆಯಾಗುತ್ತಿವೆ. ಮುಖ್ಯವಾಗಿ ಪೇಪರ್ ಹೆಚ್ಚಿನ ಚಲಾವಣೆಯಲ್ಲಿದೆ. ಇದರ ಜೊತೆಗೆ ಹೆಚ್ಚು ಮಾಡುತ್ತಾ ಹೋಗುವುದರಿಂದ ಜನಸಾಮಾನ್ಯರು ಹೇಗೆ ಸುಖವನ್ನು ಅನುಭವಿಸಬೇಕು ಎಂಬುದನ್ನು ನೋಡಬೇಕಾಗಿದೆ. ಈ ರೀತಿ ಹೆಚ್ಚು ತೆರಿಗೆ ಹಾಕುವುದರಿಂದ ಮತ್ತು ಹಣದುಬ್ಬರ ಜಾಸ್ತಿಯಾಗುವುದರಿಂದ ಸಾಮಾನುಗಳ ಬೆಲೆ ಯದ್ವಾತದ್ವಾ ಜಾಸ್ತಿಯಾಗುತ್ತದೆ. ಇದರಿಂದ ಜನಸಾಮಾನ್ಯರಿಗೆ ಸುಖ ಇರುವುದಿಲ್ಲ. ಸಾಮಾನುಗಳ ಬೆಲೆ ಜಾಸ್ತಿಯಾದಾಗ ಸರ್ಕಾರೀ ನೌಕರರಿಗೆ ಡಿ. ಎ. ಹೆಚ್ಚಿಸುವ ರೂಪದಲ್ಲಿ ಸಹಾಯ ಮಾಡಬಹುದು, ಆದರೆ ಅನೇಕ ಮಧ್ಯಮವರ್ಗದ ಜನರಿಗೆ ವರಮಾನ ಸಾಕಷ್ಟು ಇಲ್ಲದೆ ಹೆಚ್ಚಿನ ತೊಂದರೆಯಾಗುತ್ತದೆ, ಸಾಧಾರಣವಾಗಿ ಸರ್ಕಾರದವರು ಇನ್-ಡೈರೆಕ್ಟ್ ತೆರಿಗೆಯನ್ನು ಹಾಕುತ್ತಿದ್ದಾರೆ. ಮಾನ್ಯ ಅರ್ಥಸಚಿವರು ತಮ್ಮ ಬಡ್ಜೆಟ್ ಭಾಷಣದಲ್ಲಿ ವಾಟರ್ ರೇಟ್ ಟ್ಯಾಕ್ಸ್ ಹಾಕುತ್ತೇವೆಂದು ಬೇರೇ ಹೇಳಿದ್ದಾರೆ. ಇದಕ್ಕೆ ತಮ್ಮ ಪಾರ್ಟಿಯ ಒತ್ತಡ ಬಂತೋ ಏನೋಗೊತ್ತಿಲ್ಲ ; It has been left out, I think, on account of pressure.

SRI M. Y. GHORPADE .—Nobody has left it out. Notification has been published, and we are not budging an inch on that.

SRI T. R. SHAMANNA .—It is always the tendency of the Government to levy indirect taxes rather than direct taxes, and particularly wherever there is pressure they leave the taxes, and where millions of poor people are there, taxes are enforced. ಜನಸಾಮಾನ್ಯರ ಹಿತದೃಷ್ಟಿಯಿಂದ ಇನ್-ಡೈರೆಕ್ಟ್ ಟ್ಯಾಕ್ಸ್‌ನ್ನು ಕಡಿಮೆ ಮಾಡುವುದು ಬಹಳ ಒಳ್ಳೆಯದು.

ಮತ್ತು ಇದರಲ್ಲಿ ಈಗ ಹಾಕಿರತಕ್ಕ ತೆರಿಗೆಗಳಲ್ಲಿ ಅನೇಕ ಲಗ್ಜುರಿ ಗುಡ್ಸ್‌ಗೆ ಶೇಕಡಾ ೧೨ ರಿಂದ ೧೫ ರವರೆಗೆ ಏರಿಸಿದ್ದೇವೆಂದು ಹೇಳಿದ್ದಾರೆ. ಈ ಕಾಲದಲ್ಲಿ ಯಾವುದು ಲಗ್ಜುರಿ, ಯಾವುದು ಸಾಧಾರಣ ಸಾಮಾನು ಎಂದು ಹೇಳುವುದಕ್ಕಾಗುವುದಿಲ್ಲ. ಇವೊತ್ತು ಟ್ರಾನ್‌ಸಿಸ್ಟರನ್ನು ಕೂಲಿ ಮಾಡುವವರೂ ಇಟ್ಟು ಕೊಂಡಿದ್ದಾರೆ. ಹೀಗಿರುವಾಗ ಯಾವುದು ಸಾಧಾರಣ ಸಾಮಾನು, ಯಾವುದು ಲಗ್ಜುರಿಗುಡ್ಸ್ ಎಂದು ಹೇಳುವುದಕ್ಕಾಗುವುದಿಲ್ಲ. ಎಕ್ಸೈಜ್ ಡ್ಯೂಟಿಯನ್ನು ಸರಿದೂಗಿಸುವುದಕ್ಕೆ ಮೊದಲು ಮದ್ರಾಸಿನಲ್ಲಿ ಸೇಲ್ಸ್ ಟ್ಯಾಕ್ಸ್ ಇಂಟ್ರೊಡ್ಯೂಜ್ ಮಾಡಿದರು. ನಮ್ಮ ರಾಜ್ಯದಲ್ಲಿಯೂ ಅದರಂತೆ ಸೇಲ್ಸ್ ಟ್ಯಾಕ್ಸ್ ಹಾಕಿದರು. ಈಗ ಸೇಲ್ಸ್ ಟ್ಯಾಕ್ಸ್‌ನಿಂದಲೂ ವರಮಾನ ಬರುತ್ತಿದೆ. ಮತ್ತು ಪ್ರೊಹಿಬಿಷನ್‌ಗೆ ಸಂಬಂಧಪಟ್ಟ ಹಾಗೆ ಕೇಂದ್ರ ಸರ್ಕಾರದಿಂದಲೂ ಬೇಕಾದ ಹಾಗೆ ಸಹಾಯ ಬರುತ್ತಿದೆ ಅನೇಕ ಮಾನ್ಯ ಸದಸ್ಯರು ಹೇಳಿದ ಹಾಗೆ ಸೇಲ್ಸ್ ಟ್ಯಾಕ್ಸನ್ನು ಸ್ವಲ್ಪ ಬಿಗಿಯಾಗಿ ಕಲೆಕ್ಟ್ ಮಾಡಿದರೆ ಹೊಸದಾಗಿ ಮತ್ತೆ ತೆರಿಗೆಯನ್ನು ಹಾಕಬೇಕಾಗಿಲ್ಲ. ಸರಿಯಾಗಿ ವಸೂಲು ಮಾಡಿದರೆ ಖಂಡಿತವಾಗಿಯೂ ಇನ್ನೂ ೧೦-೧೫ ಕೋಟಿ-ರೂಪಾಯಿ ಸೇಲ್ಸ್ ಟ್ಯಾಕ್ಸಿನಿಂದ ಹೆಚ್ಚು ವರಮಾನ ಬರುತ್ತಿದೆ. ನಿಜವಾಗಿಯೂ ಈ ರೀತಿ ಪದೇ ಪದೇ ಸೇಲ್ಸ್ ಟ್ಯಾಕ್ಸ್ ಹಾಕುವುದು ಒಳ್ಳೆಯದಲ್ಲ ಎಂದು ನಾನು ಹೇಳುತ್ತೇನೆ. ವರ್ಷೇ ವರ್ಷೇ ಸೇಲ್ಸ್ ಟ್ಯಾಕ್ಸ್ ಅನ್ನು ಹೆಚ್ಚಿಸುತ್ತಾ ಹೋದರೆ ಅದು ಜನಗಳಿಗೆ ಹೊರೆಯಾಗುತ್ತದೆ ಆದ್ದರಿಂದ ನಾನು ಇದನ್ನು ವಿರೋಧಿಸುತ್ತೇನೆ. ಹೊಸದಾಗಿ ಎಷ್ಟು ತೆರಿಗೆಯನ್ನು ಹಾಕಿದರೂ ಅದನ್ನು ಕನ್‌ಸ್ಯೂಮರ್ ಕೊಡಬೇಕಾಗುತ್ತದೆ. ಅದರಿಂದ ಬೆಲೆಗಳು ವಿಪರೀತವಾಗಿ ಏರುತ್ತಿರುವಾಗ ಅದು ಜನಗಳಿಗೆ ಬಹಳ ಕಷ್ಟವಾಗುತ್ತದೆ. ಜನಗಳು ಉಪಯೋಗ ಮಾಡತಕ್ಕಂಥಾ ಪದಾರ್ಥಗಳ ಬೆಲೆ ಏರತಕ್ಕಂಥಾದ್ದನ್ನು, ಎಲ್ಲಿಯವರೆಗೆ ಸರ್ಕಾರದವರು ತಡೆಗಟ್ಟುವುದಿಲ್ಲ. ಅಲ್ಲಿಯವರೆಗೆ ಜನಗಳಿಗೆ ಕ್ಷೇಮ ಇರುವುದಿಲ್ಲ. ಈ ಬೆಲೆಗಳನ್ನು ನೋಡಿದರೆ ಜನಗಳು ಜೀವನ ಮಾಡುವುದು ಕಷ್ಟವಾಗುತ್ತದೆ. ಸರ್ಕಾರದವರು ಸುಖೀ ರಾಜ್ಯವನ್ನು ಸ್ಥಾಪನೆ ಮಾಡುವುದು ಖಂಡಿತಾ ಸಾಧ್ಯವಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಆದಷ್ಟು ಮಟ್ಟಿಗೆ ಬೆಲೆಗಳನ್ನು ಇಳಿಸುವುದಕ್ಕೆ ಕ್ರಮ ಕೈಗೊಳ್ಳಬೇಕು. ನಾನು

ಈ ಬಗ್ಗೆ ಕೆಲವು ತಿದ್ದುಪಡಿಗಳನ್ನು ತಂದಿದ್ದೇನೆ; ಅವುಗಳನ್ನು ಈ ಸಭೆಯಲ್ಲಿ ತೆಗೆದುಕೊಳ್ಳುವಾಗ ಯಾವ ಕಾರಣದಿಂದ ನಾನು ತಿದ್ದುಪಡಿಗಳನ್ನು ತಂದಿದ್ದೇನೆ ಎನ್ನುವುದನ್ನು ಆಗ ನಾನು ಸೂಚಿಸುತ್ತೇನೆ. ಇದರ ಜೊತೆಗೆ ನಾನು ಇನ್ನೊಂದು ವಿಷಯವನ್ನು ಸೂಚನೆ ಮಾಡುತ್ತೇನೆ ಅದೇನೆಂದರೆ ಸೇಲ್ಸ್ ಟ್ಯಾಕ್ಸ್ ಅನೇಕ ಕಡೆ ಸರಿಯಾಗಿ ವಸೂಲಾಗದೇ ಲೋಪವಾಗುತ್ತಿದೆ. ಆದ್ದರಿಂದ ಅದನ್ನು ಸರಿಯಾಗಿ ವಸೂಲು ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಈಗ ಇನ್ನೊಂದು ವಿಚಾರ ಹೇಳುತ್ತೇನೆ, ನಮ್ಮ ಬೆಂಗಳೂರು ನಗರ ಕಾರ್ಪೋರೇಷನವರು ಬಾಂಡೆಡ್ ವೇರ್ ಹೌಸ್‌ಗಳನ್ನು ಕಟ್ಟಿದ್ದಾರೆ. ಇದರಿಂದ ಕಾರ್ಪೋರೇಷನ್ನಿಗೆ ಸುಮಾರು ೧೫ ಲಕ್ಷ ರೂಪಾಯಿಗಳ ವರಮಾನ ಬರುತ್ತದೆ ಈ ಕಟ್ಟಡವನ್ನು ಕಟ್ಟುವುದಕ್ಕೆ ಅಂಥಾ ಹೆಚ್ಚಿನ ಹಣವೇನೂ ಖರ್ಚಾಗಿಲ್ಲ. ಇದರಿಂದ ಒಂದು ಹೆಚ್ಚಿನ ಖಾಯಂ ವರಮಾನ ಬರುತ್ತದೆ. ಆದ್ದರಿಂದ ಬೆಂಗಳೂರು, ಮಂಗಳೂರು, ಬೆಳಗಾವ್ ಮತ್ತು ಧಾರವಾಡ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಬಾಂಡೆಡ್ ವೇರ್ ಹೌಸ್‌ಗಳನ್ನು ಸರ್ಕಾರದವರು ಕಟ್ಟಿಸುವುದು ಬಹಳ ಒಳ್ಳೆಯದು.

ಆಮೇಲೆ ತಯಾರಿಕೆ ಘಟ್ಟದಲ್ಲಿ ಹಾಕುತ್ತಿರುವ ತೆರಿಗೆಯನ್ನು ಬಾಂಡೆಡ್ ವೇರ್ ಹೌಸ್‌ನಲ್ಲಿ ಮಾರಾಟ ವಾಗುವುದರ ಮೇಲೆ ತೆರಿಗೆ ಹಾಕುವಂತೆ ಬದಲಾಯಿಸಿದರೆ ನಮಗೆ ೧೫ ರೂಪಾಯಿಗೆ ಬದಲು ೫೦ ರೂಪಾಯಿ ಬರುತ್ತದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು, ಜನಗಳು ಕುಡಿದು ಮನೆ ಹಾಳು ಮಾಡಿ ಕೊಂಡು ೧೫ ರೂಪಾಯಿ ಗಳಿಗೆ ಬದಲು ೫೦ ರೂಪಾಯಿ ತೆರಿಗೆಯನ್ನು ಕೊಡುತ್ತಾರೆ. ಆದ್ದರಿಂದ ಕುಡಿಯು ವವನ ಮೇಲೆ ತೆರಿಗೆಯನ್ನು ಜಾಸ್ತಿ ಹಾಕಿ ಅದರ ಬೆಲೆಯನ್ನು ಜಾಸ್ತಿ ಮಾಡಿದರೆ ಕುಡಿಯುವವನು ಕುಡಿಯುವುದನ್ನು ಕಡಿಮೆ ಮಾಡುವುದಿಲ್ಲ. ಆದ್ದರಿಂದ ಮಲ್ಟಿಪಾಯಿಂಟ್ ತೆರಿಗೆಯನ್ನು ಎಕ್ಸೈಜ್ ಮೇಲೆ ಹಾಕುವುದು ಸರಿಯಲ್ಲ. ಆದಷ್ಟು ಮಟ್ಟಿಗೆ ಜನಕುಡಿಯುವುದನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಒಂದಕ್ಕೆ ಮೂರರಷ್ಟು ಪರೋಕ್ಷವಾಗಿ ತೆರಿಗೆಯನ್ನು ಹಾಕಿರುವುದು ಸರಿಯಲ್ಲ. ಆದಷ್ಟು ಮಲ್ಟಿಪಾಯಿಂಟ್ ಟ್ಯಾಕ್ಸ್ ಹಾಕುವುದನ್ನು ಕಡಿಮೆ ಮಾಡುವುದು ಒಳ್ಳೆಯದು. ಅದರಿಂದ ತೆರಿಗೆ ಹೆಚ್ಚು ಬರಬಹುದು. ಆದರೆ ಲೆಕ್ಕವನ್ನು ಇಡುವುದು ಬಹಳ ಕಷ್ಟವಾಗುತ್ತದೆ. ಮತ್ತು ಇವೇಜನ್ ಕೂಡ ಜಾಸ್ತಿ ಯಾಗುತ್ತದೆ ಮತ್ತು ಅಡ್ವಾನ್ಸ್ ಟ್ಯಾಕ್ಸ್ ಕೊಡಬೇಕೆಂದು ಇದರಲ್ಲಿ ಹೇಳಿದ್ದಾರೆ ಟ್ಯಾಕ್ಸ್ ಕಲೆಕ್ಟ್ ಮಾಡುವುದಕ್ಕಿಂತ ಮುಂಚೆ ಅಡ್ವಾನ್ಸ್ ಕೊಡಬೇಕು ಎನ್ನುವುದರ ಬಗ್ಗೆ ಸ್ವಲ್ಪ ವಿವರವನ್ನು ಕೊಟ್ಟರೆ ಒಳ್ಳೆಯದು. ಈಗ ಇನ್‌ಕಂಟ್ಯಾಕ್ಸಿನಲ್ಲಿ ಮುಂದಿನ ವರ್ಷಕ್ಕೆ ಅಡ್ವಾನ್ಸ್ ಕೊಡಬೇಕಾಗುತ್ತದೆ. ಆದರೆ ಸೇಲ್ಸ್ ಟ್ಯಾಕ್ಸಿನಲ್ಲಿಯೂ ಟ್ಯಾಕ್ಸ್ ಕಲೆಕ್ಟ್ ಮಾಡುವುದಕ್ಕೆ ಮುಂಚೆಯೇ ಅಡ್ವಾನ್ಸ್ ಟ್ಯಾಕ್ಸ್ ಕೊಡಬೇಕೆಂದು ಹೇಳಿದರೆ ಈ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕು. ಈ ಟ್ಯಾಕ್ಸ್ ಕಲೆಕ್ಷನ್ ವಿಷಯದಲ್ಲಿ ಆಫೀಸರುಗಳು ವರ್ತಕರಿಗೆ ಕಿರುಕುಳ ಕೊಡುತ್ತಾರೆ. ಇದರಿಂದ ಲಂಚರುಷುವತ್ತಿಗೆ ಅವಕಾಶವಾಗುತ್ತದೆ. ಆದ್ದರಿಂದ ಸೇಲ್ಸ್ ಟ್ಯಾಕ್ಸಿಗೆ ಸಂಬಂಧಪಟ್ಟಹಾಗೆ ಲೆಕ್ಕವನ್ನು ಇಡುವುದಕ್ಕೆ ಮತ್ತು ಅದನ್ನು ವಸೂಲು ಮಾಡುವುದಕ್ಕೆ ಸಿಂಪ್ಲಿಫೈ ಮಾಡಬೇಕು. ಮತ್ತು ಈಗ ತೆರಿಗೆಯನ್ನು ವಸೂಲು ಮಾಡುವ ಬಗ್ಗೆ ಕೆಲವು ಮೆಜರ್ಸ್ ತೆಗೆದುಕೊಂಡಿದ್ದಾರೆ ಹೈಕೋರ್ಟ್ ಮತ್ತು ಸುಪ್ರೀಮ್ ಕೋರ್ಟಿನ ತೀರ್ಮಾನವನ್ನು ಅನುಸರಿಸಿ ಯಾವ ಯಾವ ತಿದ್ದುಪಡಿಗಳನ್ನು ಸರ್ಕಾರದವರು ತಂದಿದ್ದಾರೆಯೋ ಅದರ ಬಗ್ಗೆ ನಮ್ಮ ಅಭ್ಯಂತರವಿಲ್ಲ. ಆದರೆ ಈ ಸೇಲ್ಸ್ ಟ್ಯಾಕ್ಸ್ ತಿದ್ದುಪಡಿ ಮಸೂದೆಯ ವಿಚಾರದಲ್ಲಿ ನನ್ನ ವಿರೋಧವಿಷ್ಟೆ, ಸರ್ಕಾರಕ್ಕೆ ಬರಬೇಕಾಗಿರತಕ್ಕಂಥಾ ತೆರಿಗೆಯನ್ನು ಸರಿಯಾಗಿ ವಸೂಲು ಮಾಡಿದರೆ ಹೊಸ ತೆರಿಗೆಯನ್ನು ಹಾಕಬೇಕಾದ ಅವಶ್ಯಕತೆ ಇಲ್ಲ. ಈ ರೀತಿ ಪದೇ ಪದೇ ತೆರಿಗೆಯನ್ನು ಏರಿಸುವುದರಿಂದ ನೌಕರರಿಗೆ ಸಾಮಾನ್ಯ ಜನಗಳಿಗೆ ನಿತ್ಯಜೀವನದಲ್ಲಿ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ನಾನು ಇದನ್ನು ವಿರೋಧಿಸುತ್ತೇನೆ. ಉಳಿದ ವಿಚಾರಗಳನ್ನು ಮುಂದೆ ನನ್ನ ತಿದ್ದುಪಡಿಗಳು ಬಂದಾಗ ಅವಕಾಶವನ್ನು ತೆಗೆದುಕೊಂಡು ಮಾತನಾಡುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ (ತಿಪಟೂರು) :—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಮಂತ್ರಿಗಳು ಈಗ ಈ ಸಭೆಯ ಮುಂದೆ ಮಾರಾಟ ತೆರಿಗೆ ತಿದ್ದುಪಡಿ ಮಸೂದೆಯನ್ನೇನು ತಂದಿದ್ದಾರೆ ಇದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಶ್ರೀಮಾನ್ ಶಾಮಣ್ಣನವರು ಹೇಳಿದಹಾಗೆ ಸರ್ಕಾರದವರು ಅನೇಕ ಕಾಯಿದೆಗಳನ್ನು ಮಾಡಿ ಹೆಚ್ಚು ತೆರಿಗೆಗಳನ್ನು ಹಾಕುವ ನೆಪದಲ್ಲಿ ವ್ಯಾಪಾರಸ್ಥರಿಗೆ ಇಲ್ಲದ ಸಲ್ಲದ ಕಿರುಕುಳ ವನ್ನು ಕೊಟ್ಟಿದ್ದಾರೆ ಈಗ ಇರತಕ್ಕಂಥಾ ರೀತಿಯಲ್ಲಿಯೇ ಸರಿಯಾದ ರೀತಿಯಲ್ಲಿ ಬಿಗಿಯಾಗಿ ತೆರಿಗೆಯನ್ನು ಸಂಪೂರ್ಣವಾಗಿ ವಸೂಲು ಮಾಡಿದರೆ ಇದಕ್ಕಿಂತ ಹೆಚ್ಚು ಹಣ ಸರ್ಕಾರದ ಬೊಕ್ಕಸಕ್ಕೆ ಬರುತ್ತದೆ ಎಂದು ನಾನು ನಂಬಿದ್ದೇನೆ. ಈಗ ಟರ್ನ್ ಓವರ್ ಮೇಲೆ ಸರ್ಕಾರದವರು ತೆರಿಗೆಯನ್ನು ಹಾಕಿದ್ದಾರೆ. ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಯಾವ ಯಾವ ಪದಾರ್ಥಗಳ ಮೇಲೆ ಬೀಳುತ್ತದೆ ಎಂಬುದು ನಮಗೆ ಗೊತ್ತಾಗುವುದಿಲ್ಲ. ಮತ್ತು ಪರ್ಚೇಜ್ ಟ್ಯಾಕ್ಸ್ ಯಾವುದರ ಮೇಲೆ ಬೀಳುತ್ತದೆ ಎಂಬುದು ಗೊತ್ತಾಗುತ್ತಿಲ್ಲ. ಏತಕ್ಕೆಂದರೆ ಒಂದೇ ಕಮಾಡಿಟಿ ಮೇಲೆ ಅನೇಕ ವಿಧವಾದ ತೆರಿಗೆಗಳನ್ನು ಹಾಕುತ್ತಿದ್ದಾರೆ. ಇದರಿಂದ ಸಾಮಾನ್ಯ ಜನಗಳಿಗೆ

(ಶ್ರೀ ಟಿ. ಎಂ. ಮಂಜುನಾಥ)

ಎಷ್ಟರಮಟ್ಟಿಗೆ ಕಷ್ಟವಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಈಗ ಟರ್ನ್ ಓವರ್ ಟ್ಯಾಕ್ಸ್ ಹಾಕಿದ ಮೇಲೆ ಪರ್ಚೇಸ್ ಸೇಲ್ಸ್ ಟ್ಯಾಕ್ಸ್ ಬೇರೆ ಹಾಕಿದ್ದಾರೆ. ಆದ್ದರಿಂದ ಪರ್ಚೇಜ್ ಸೇಲ್ಸ್ ಟ್ಯಾಕ್ಸ್ ಹಾಕಿದ ಮೇಲೆ ಟರ್ನ್ ಓವರ್ ಟ್ಯಾಕ್ಸಿಗೆ ರಿಯಾಯಿತಿ ಕೊಡಬೇಕೆಂದು ನಾನು ಹೇಳುತ್ತೇನೆ.

ಈಗ ಏನಾಗಿದೆಯೆಂದರೆ, ಕೆಲವು ಲಿಕರ್ಸ್‌ಗೆ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕಿದ್ದಾರೆ. ಮತ್ತು ಕೆಲವು ಪದಾರ್ಥಗಳಿಗೆ ಟ್ಯಾಕ್ಸ್ ಹಾಕುತ್ತಾ ಹಾಕುತ್ತಾ ಕೊನೆಗೆ ವ್ಯಾಪಾರಸ್ಥರು ಇದರಲ್ಲಿ ಮೋಸ ಮಾಡುವ ಸನ್ನಿವೇಶ ಇರುತ್ತದೆ. ಆದ್ದರಿಂದ ಎಲ್ಲಿ ಗೂಡ್ಸ್ ಪ್ರೊಡ್ಯೂಸ್ ಆಗುತ್ತದೆ ಅಲ್ಲಿ ಒಂದೇ ಕಡೆ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕಿ; ಅದನ್ನು ಸ್ವಾಗತ ಮಾಡುತ್ತೇವೆ. ಈಗ ಕೊಬ್ಬರಿ ಮತ್ತು ತೆಂಗಿನಕಾಯಿಗೆ ಪರ್ಚೇಸ್ ಟ್ಯಾಕ್ಸ್ ಹಾಕುತ್ತಿದ್ದೀರಿ. ಅದರ ಜೊತೆಗೆ ಪುನಃ ಮತ್ತೊಮ್ಮೆ ಟ್ಯಾಕ್ಸ್ ಹಾಕಿದಾಗ ಅದು ಸರಿಯಾಗುವುದಿಲ್ಲ. ಅದೇ ತಮಿಳ್ನಾಡಿನಲ್ಲಿ ತೆಂಗಿನಕಾಯಿ ಪರಿಶೇಬಲ್ ಗೂಡ್ಸ್ ಎಂದು ಅದರ ಮೇಲಿನ ಪರ್ಚೇಸ್ ಟ್ಯಾಕ್ಸ್ ತೆಗೆದು ಹಾಕಿದ್ದಾರೆ. ಇದು ಸಾರ್ವಜನಿಕರಿಗೆ ಅವಶ್ಯವಾಗಿ ಬೇಕಾಗಿರತಕ್ಕಂತಹ ವಸ್ತು. ಆದ್ದರಿಂದ ಪಕ್ಕದ ರಾಜ್ಯದಲ್ಲಿ ತೆಗೆದ ಹಾಗೆ ಇಲ್ಲಿಯೂ ಅದನ್ನು ತೆಗೆದು ಹಾಕಬೇಕೆಂದು ಹೇಳುತ್ತೇನೆ. ಇನ್ನು ಈ ಟರ್ನ್ ಓವರ್ ಟ್ಯಾಕ್ಸ್ ಹಾಕುತ್ತಿದ್ದೀರಿ. ಉದಾಹರಣೆಗೆ ೭೫ ಸಾವಿರ ರೂಪಾಯಿ ವ್ಯಾಪಾರ ಮಾಡತಕ್ಕ ವ್ಯಾಪಾರಿಗೆ ನೀವು ಒಂದು ರೂಪಾಯಿಯಂತೆ ಟ್ಯಾಕ್ಸ್ ಹಾಕಿದರೆ ಅದನ್ನು ೭೫೦೦ ರೂಪಾಯಿ ಕೊಡಬೇಕಾಗುತ್ತದೆ. ಆದರೆ ಅವನು ಎಷ್ಟೋ ಬಂಡವಾಳ ಹಾಕಿರುತ್ತಾನೆ, ಎಷ್ಟೋ ಖರ್ಚು ಮಾಡಿರುತ್ತಾನೆ; ಅದಕ್ಕೆಲ್ಲಾ ಒಂದಂತಹ ಲಾಭವೇನೂ ಸಾಲುವುದಿಲ್ಲ ಅದೇ ರೀತಿ ಇವತ್ತು ಒಬ್ಬ ವ್ಯಾಪಾರಸ್ಥನು ತಿಂಗಳಿಗೊಮ್ಮೆ ಅಕೌಂಟ್ಸ್ ಕೊಡಬೇಕೆಂದು ಹೇಳುತ್ತಿದ್ದಾರೆ. ಇದರಿಂದ ಏನಾಗುತ್ತದೆ ಅಂದರೆ, ಅಧಿಕಾರಿಗಳಿಂದ ಕಿರುಕುಳ ಜಾಸ್ತಿಯಾಗುತ್ತದೆ. ನಮ್ಮ ಊರಿನಲ್ಲಿ ಈ ಸಣ್ಣ ಸಣ್ಣ ವರ್ತಕರು ನನ್ನ ಹತ್ತಿರ ಬಂದು ಸರ್ಕಾರದವರು ಈ ರೀತಿ ಮಾಡುತ್ತಿದ್ದಾರೆಯಂತೆ. ಅಧಿಕಾರಿಗಳು ಅವಾಗಲೇ ನಮ್ಮ ಮೇಲೆ ಬೀಳುತ್ತಿದ್ದಾರೆ ಎಂಬ ವಿಚಾರವನ್ನು ಹೇಳಿದ್ದಾರೆ. ಆದ್ದರಿಂದ ಈ ತಿಂಗಳು-ತಿಂಗಳು ಲೆಕ್ಕ ಕೊಡುವುದನ್ನು ತಪ್ಪಿಸಿ ಕನಿಷ್ಟ ಪಕ್ಷ ೬ ತಿಂಗಳಿಗೊಮ್ಮೆಯಾದರೂ ಲೆಕ್ಕ ಕೊಡುವಂತಹ ಏರ್ಪಾಡನ್ನು ಮಾಡಬೇಕೆಂದು ಹೇಳುತ್ತೇನೆ. ದಯವಿಟ್ಟು ಸರ್ಕಾರದವರು ಇದನ್ನು ಪರ್ಯಾಲೋಚಿಸಬೇಕೆಂದು ಹೇಳುತ್ತೇನೆ. ಅದೇ ರೀತಿ ಇವತ್ತು ನೂರಕ್ಕೆ ೧೦ ಭಾಗದಷ್ಟು ನ್ಯಾಯವಾಗಿ ಬರಬೇಕಾದ ತೆರಿಗೆ ಬರುತ್ತಾ ಇಲ್ಲ. ಇವತ್ತು ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಕಮಿಟಿಗೆ ಹೋದರೆ ಇದರ ವಿಚಾರ ಗೊತ್ತಾಗುತ್ತದೆ. ಇವತ್ತು ಒಬ್ಬ ವ್ಯಾಪಾರಿಯ ಹತ್ತಿರ ಎಷ್ಟು ಟರ್ನ್ ಓವರ್ ಆಗಿರುತ್ತದೆ, ಅದರಲ್ಲಿ ಎಷ್ಟೋ ಪದಾರ್ಥಗಳಿಗೆ ತೆರಿಗೆ ಕೊಡದೆ ತಪ್ಪಿಸಿಕೊಳ್ಳುತ್ತಾನೆ. ಆದರೆ ನಮ್ಮ ತಿಪಟೂರ್ ರೆಗ್ಯುಲೇಟೆಡ್ ಮಾರ್ಕೆಟಿನಲ್ಲಿ ಒಬ್ಬ ವ್ಯಾಪಾರಿ ಸಹ ಒಂದು ಕಾಸೂ ಮೋಸ ಮಾಡುವುದಿಲ್ಲ. ಏಕೆಂದರೆ ಅಲ್ಲಿರತಕ್ಕ ಸಾಮಗ್ರಿಗಳು ಉತ್ತರ ದೇಶಗಳಿಗೆ ರೈಲ್ವೆಯಲ್ಲಿ ಮತ್ತು ಲಾರಿಗಳಲ್ಲಿ ಹೋಗುತ್ತಿವೆ. ಅವೆಲ್ಲವೂ ಲೆಕ್ಕ ಪ್ರಕಾರವಾಗಿ ಹೋಗುತ್ತಿದೆಯಲ್ಲದೆ ತೆರಿಗೆಯನ್ನು ಯಾರೂ ತಪ್ಪಿಸುತ್ತಾ ಇಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ಅನೇಕ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗಳು ಇವೆ ಅಲ್ಲೆಲ್ಲಾ ತೆರಿಗೆಯನ್ನು ತಪ್ಪಿಸುವವರು ಜಾಸ್ತಿ ಇದ್ದಾರೆ. ನಮ್ಮ ತಿಪಟೂರ್‌ನಲ್ಲಿ ಕೊಡತಕ್ಕ ತೆರಿಗೆ ಬೇರೆ ಎಲ್ಲಿಯೂ ಕೊಡುತ್ತಾ ಇಲ್ಲ. ಆದ್ದರಿಂದ ತೆರಿಗೆ ಸರಿಯಾಗಿ ವಸೂಲು ಮಾಡತಕ್ಕದ್ದು ಅಧಿಕಾರಿಗಳ ಕರ್ತವ್ಯ. ಕೇವಲ ಹೆಚ್ಚು ಹೆಚ್ಚು ಟರ್ನ್ ಓವರ್ ಟ್ಯಾಕ್ಸ್ ಹಾಕುವುದರಿಂದ ಏನೂ ಪ್ರಯೋಜನವಾಗದೆ ಜನರಿಗೆ ಕಿರುಕುಳ ಜಾಸ್ತಿಯಾಗುತ್ತದೆ ಅಷ್ಟೆ. ನೀವು ಹಿಂದೆ ಏನು ತೆರಿಗೆ ಹಾಕುತ್ತಿದ್ದೀರಿ. ಅದನ್ನೇ ಇಟ್ಟುಕೊಂಡು, ಅದು ಸರಿಯಾಗಿ ವಸೂಲಿ ಆಗುವಂತೆ ಪ್ರಯತ್ನ ಮಾಡಬೇಕಲ್ಲದೆ ಇನ್ನೂ ತೆರಿಗೆ ಹೆಚ್ಚಿಗೆ ಮಾಡಬಾರದು ಅದೇ ರೀತಿಯಲ್ಲಿ ತಮ್ಮ ಅಧಿಕಾರಿಗಳು ಸಹ ಇದರಲ್ಲಿ ಬಹಳ ದಕ್ಷತೆಯಿಂದ ಮತ್ತು ಪ್ರಾಮಾಣಿಕತನದಿಂದ ವರ್ತಿಸುವುದಕ್ಕೆ ತಾವು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಅಧಿಕಾರಿಗಳಲ್ಲಿ ಸಹ, ಕೆಲವರು ಹೇಗೆ ಸುಳ್ಳು ಲೆಕ್ಕ ಬರೆದುಕೊಡಬೇಕೆಂದು ಹೇಳಿ ಕೊಡುವವರೂ ಇದ್ದಾರೆ. ಆದ್ದರಿಂದ ಅವನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಿದರೆ ನ್ಯಾಯವಾಗಿ ಬರಬೇಕಾದ ತೆರಿಗೆಯಾದರೂ ಬರುವುದಕ್ಕೆ ಸಾಧ್ಯವಾಗುತ್ತದೆ. ಕೊನೆಯದಾಗಿ, ನಿಮ್ಮ ಟರ್ನ್ ಓವರ್ ಟ್ಯಾಕ್ಸ್ ಏನಿದೆ, ಇದರಿಂದ ಸಣ್ಣ ಸಣ್ಣ ವ್ಯಾಪಾರಿಗಳಿಗೆ ಬಹಳ ತೊಂದರೆಯಾಗುವುದರಿಂದ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು, ಮತ್ತು ಅದೇ ರೀತಿಯಲ್ಲಿ ಈ ತೆಂಗಿನಕಾಯಿ ಮೇಲೆ ಏನು ತೆರಿಗೆ ಹಾಕುತ್ತೀರಿ ಅದನ್ನು ತೆಗೆದುಹಾಕಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೆ, ಇವತ್ತು ತಂದಿರತಕ್ಕಂತಹ ತಿದ್ದುಪಡಿಯ ಬಗ್ಗೆ ಎರಡು ಮೂರು ವಿಷಯಗಳನ್ನು ಮಾನ್ಯ ಅರ್ಥಸಚಿವರ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಮಂತ್ರಿಯವರು ಇದರ ಬಗ್ಗೆ ವಿವರಗಳನ್ನು ಸಹ ಕೊಟ್ಟಿದ್ದಾರೆ. ಅವರು ವಿವರಗಳನ್ನು ಕೊಡು

ತ್ತಿರುವಾಗ ನೋಡಿದರೆ ಬಹಳ ನ್ಯಾಯವಾಗಿ ಹಾಕಿದ್ದಾರೊ ಏನೋ ಎನ್ನುವ ರೀತಿಯಲ್ಲಿ, ನಮಗೆ ಕನ್‌ವಿನ್ಸ್ ಮಾಡುವ ರೀತಿಯಲ್ಲಿ ಹೇಳಿದ್ದಾರೆ. ಅದರಲ್ಲಿ ಕೆಲವನ್ನು ಒಪ್ಪಿದರೂ, ಕೆಲವನ್ನು ಒಪ್ಪುವುದಕ್ಕಾಗುವುದಿಲ್ಲ. ಮೊದಲನೆಯದಾಗಿ ಮಾನ್ಯ ಶಾಮಣ್ಣನವರು ಹೇಳಿದ ಹಾಗೆ ನಾವು ಇವತ್ತು ಇನ್‌ಡೈರೆಕ್ಟ್ ಟ್ಯಾಕ್ಸಸ್ ಬಹಳ ಜಾಸ್ತಿಯಾಗಿ ಹಾಕುತ್ತಿದ್ದೇವೆ. ಅದರ ಹೊರೆ ಜನರ ಮೇಲೆ ಅತ್ಯಧಿಕವಾಗಿದೆ. ಪುನಃ ನಾವು ಹೆಚ್ಚಿನ ಹೊರೆಯನ್ನು ಹೊರಿಸಲು ಹೋದರೆ, ಅದನ್ನು ಹೊರಲು ಅವರಿಗೆ ಶಕ್ತಿ ಇಲ್ಲದಾಗ ಆಗುತ್ತದೆ. ಅದರಿಂದ ನಮಗೆ ಹಣವೇನೋ ಬರಬಹುದು. ಆದರೆ ಹಣ ಬಂದರೂ ಜನರ ಕಷ್ಟವನ್ನು ಇದರಿಂದ ತಪ್ಪಿಸುವುದಕ್ಕಾಗುವುದಿಲ್ಲ. ಅದೇ ರೀತಿ ನಾವು ಏನೊಂದು ಗುರಿಯನ್ನು ಮುಟ್ಟಬೇಕೆಂದು ಹೇಳುತ್ತಿದ್ದೇವೆ, ಆ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ನನಗೆ ತಿಳಿದ ಮಟ್ಟಿಗೆ ಭೂತಲಿಂಗಂ ಕಮಿಟಿಯವರು ಸಹ "ಒಟ್ಟಾರೆ ಸಮಗ್ರವಾದ ದೃಷ್ಟಿಯನ್ನು ಇಟ್ಟುಕೊಂಡು ಹೋಗಬೇಕಾಗುತ್ತದೆ ಹೊರತು, ಅಲ್ಲಿ ಇಲ್ಲಿ ಸಣ್ಣಪುಟ್ಟ ರೀತಿಯಲ್ಲಿ ಕೆದಕುವ ರೀತಿಯಲ್ಲಿ ಮಾಡುತ್ತಾ ಹೋದರೆ ಅದರಿಂದ ಬಾಧಕವಾಗುತ್ತದೆಯೇ ವಿನಹ ಸಾಧಕವಾಗುವುದಿಲ್ಲ ಎಂದು ಹೇಳಿದ್ದಾರೆ. ಮತ್ತು ಇದರಿಂದ ಅಡ್ಮಿನಿಸ್ಟ್ರೇಟಿವ್ ಮಶಿನರಿಗೆ ತೆರಿಗೆ ವಸೂಲು ಮಾಡುವುದಕ್ಕೆ ಕಷ್ಟವಾಗುತ್ತದೆಂದು ಹೇಳಿದ್ದಾರೆ. ಇವತ್ತು ನೀವು ಹಲವು ಪಾಯಿಂಟುಗಳನ್ನು ಇಟ್ಟುಕೊಂಡರೆ ಅದರಿಂದ ಜನರಿಗೆ ಕಿರುಕುಳ ಜಾಸ್ತಿಯಾಗುತ್ತದೆಯಲ್ಲದೆ, ಏನೂ ಪ್ರಯೋಜನವಾಗುವುದಿಲ್ಲ. ನನಗೆ ತಿಳಿದ ಮಟ್ಟಿಗೆ ಇದು ಸಮರ್ಪಕವಾಗಿಲ್ಲವೆಂದು ಹೇಳುತ್ತೇನೆ. ಭೂತಲಿಂಗಂ ಕಮಿಟಿಯವರು ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಹೀಗಿರಬೇಕಾದರೆ ನಮ್ಮ ಅರ್ಥ ಸಚಿವರು ಒಂದು ಸಮಗ್ರವಾದ ಬಿಲ್ಲನ್ನು ತೆಗೆದುಕೊಂಡು ಬರಬಹುದಾಗಿತ್ತು. ಅಡ್ಮಿನಿಸ್ಟ್ರೇಟಿವ್ ಪ್ಯಾಂಟಿನಿಂದಲೂ ಸಿಂಗಲ್ ಪ್ಯಾಂಟ್ ಇದ್ದರೆ ಒಳ್ಳೆಯದೆಂದು ಅವರು ಹೇಳಿದ್ದಾರೆ. ಹೀಗೆ ಯಾವುದು ಸಿಂಗಲ್ ಪ್ಯಾಂಟ್ ಇರಬೇಕು, ಯಾವುದು ಮಲ್ಟಿ ಪ್ಯಾಂಟ್ ಇರಬೇಕೆಂಬುದನ್ನು ಯೋಚನೆ ಮಾಡಿ ಒಂದು ಶಾಸನವನ್ನು ತಂದಿದ್ದರೆ ಸಮರ್ಪಕವಾಗುತ್ತಿತ್ತು. ಈ ರೀತಿ ತಂದಿದ್ದರೆ ಜನಸಾಮಾನ್ಯರ ಮೇಲೆ ಕೂಡ ಹೊರೆ ಹೊರಿಸುವುದನ್ನು ಕಮ್ಮಿ ಮಾಡಬಹುದಾಗಿತ್ತು. ಅದು ಹೇಗೆ ಆಗಿದೆ ಎಂದ ಮಾನ್ಯ ಮಂತ್ರಿಯವರು ಕೇಳಬಹುದು. ಇದರಲ್ಲಿ ೩ ಪರ್‌ಸೆಂಟ್ ಇರುವುದನ್ನು ಮೂರೂವರೆ ಪರ್‌ಸೆಂಟ್ ಮಾಡಿದ್ದೀರಿ. ಯಾವುದರ ಮೇಲೆ ಮಾಡಿದ್ದೀರಿ ಎಂದು ಹೇಳುತ್ತೇನೆ. ಅದರ ಬಗೆ ಭೂತಲಿಂಗಂ ಕಮಿಟಿಯವರು ಒಂದು ದೊಡ್ಡ ಪಟ್ಟಿಯನ್ನು ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಸೇಫ್ಟಿಮ್ಯಾಚಸ್‌ಗೆ ಮೂರು ಪರ್‌ಸೆಂಟ್ ಇರುವುದನ್ನು ಮೂರೂವರೆ ಮಾಡುತ್ತಿದ್ದೀರಿ.

ಸೇಫ್‌ಟಿ ಮ್ಯಾಚಸ್‌ಗೆ ಜಾಸ್ತಿ ತೆರಿಗೆ ಹಾಕಿದರೆ, ಅದು ಯಾರ ಮೇಲೆ ಬೀಳುತ್ತದೆಂಬುದನ್ನು ನೀವು ಯೋಚನೆಮಾಡಬೇಕು. ಈಗ ಸೇಕಡ ೩ ರಷ್ಟು ಇದೆ. ಅದನ್ನು ಎಲ್ಲರೂ ಉಪಯೋಗಿಸುತ್ತಾರೆ. ಅದನ್ನು ಉಪಯೋಗಿಸದೇ ಇರುವ ಜನರಿಲ್ಲ. ಮಲ್ಟಿ ಪಾಯಿಂಟ್ ಸೇಕಡ ೩ ೧/೨ ಆಗುತ್ತದೆ ಇದರಿಂದ Naturally the price of Safety Matches will increase. ಸೇಫ್‌ಟಿ ಮ್ಯಾಚಸ್ ಬೆಲೆ ಈಗಾಗಲೇ ಜಾಸ್ತಿಯಾಗುತ್ತಿದೆ. ಮಲ್ಟಿ ಪಾಯಿಂಟ್ (ಸೇಕಡ) ೩ ಇರುತ್ತದೆ. ಅದರ ಬಗ್ಗೆ ಏನೂ ಹೇಳುವುದಕ್ಕಾಗುವುದಿಲ್ಲ. ಇನ್ನು ರೆಡಿ ಮೇಡ್ ಗಾರ್‌ಮೆಂಟ್ಸ್. ಇದು ಹೆಚ್ಚು ಹೆಚ್ಚಿಗೆ ಪಾಪುಲರ್ ಆಗುತ್ತಿದೆ ಬಟ್ಟೆಗಳನ್ನು ಕೊಂಡುಕೊಂಡು ಹೊಲಿಸುವುದು ಒಂದುರೀತಿ; ಆದರೆ ಇದನ್ನೇ ಅನೇಕ ಜನರು ಹೆಚ್ಚಾಗಿ ಕೊಂಡುಕೊಳ್ಳಬಹುದು.

3-30 P. M.

ಶ್ರೀ ಎಂ. ವೈ. ಘೋರ್ಪಡೆ.—ಸಿಂಗಲ್ ಪಾಯಿಂಟ್ ಎಲ್ಲೆಲ್ಲಿ ಹಾಕುವುದಕ್ಕೆ ಸಾಧ್ಯ ಅಂತಹ ಪದಾರ್ಥಗಳ ಮೇಲೆ ಸಿಂಗಲ್ ಪಾಯಿಂಟ್ ಹಾಕಬೇಕೆಂಬುದೇ ಸರ್ಕಾರದ ಧೋರಣೆ. ಮಲ್ಟಿ ಪಾಯಿಂಟ್ ಇರುವ ವಸ್ತುಗಳ ಮೇಲೆ ಸಿಂಗಲ್ ಪಾಯಿಂಟ್ ನೇರವಾಗಿ ಟ್ಯಾಕ್ಸ್ ಮಾಡುವುದಕ್ಕೆ ಅನಾನುಕೂಲವಿದೆ. ಅಂಥಾದ್ದಕ್ಕೆ ಮಲ್ಟಿ ಪಾಯಿಂಟ್ ಟ್ಯಾಕ್ಸ್ ಇದೆ. ಅದನ್ನು ಬೇರ್ಪಡಿಸಿ ಇದರ ಮೇಲೆ ಸಿಂಗಲ್ ಪಾಯಿಂಟ್ ಹಾಕಬೇಕೆಂದರೆ, ಅದು ರಚನಾತ್ಮಕ ಸಲಹೆಯಾಗುತ್ತದೆ.

SRI M. S. KRISHNAN.—It is better to put single point. As you are correctly pointed out, you cannot administratively avoid single point. Then we are forced to avoid multipoint.

SRI M. Y. GHORPADE.—If we feel single point is better, we will certainly do it wherever it is possible. We will progressively increase them. Most of the items come under single point. But we are not in a position to remove the multy point without affecting the source of income.

ಶ್ರೀ ಎಂ. ಎಸ್. ಕೃಷ್ಣನ್.—ಅದು ಏನು ತೋರಿಸುತ್ತದೆಂದರೆ, ಇನ್ನು ಯಾವ್ಯಾವುದರ ಮೇಲೆ ಮಲ್ಟಿ ಪಾಯಿಂಟ್ ಇಡಬೇಕು, ಸಿಂಗಲ್ ಪಾಯಿಂಟ್ ಇಡಬೇಕು ಎಂಬುದನ್ನು ಅಭ್ಯಾಸ ಮಾಡಬೇಕಾಗಿದೆ. ನಾನು ಹೇಳುವುದಿಷ್ಟೆ. ಮಲ್ಟಿ ಪಾಯಿಂಟ್‌ನಲ್ಲಿ ಸೇಕಡ ೩ ರಷ್ಟು ಇರುವುದು ಈಗ ಸೇಕಡ ೩ ೧/೨ ರಷ್ಟಾಗುತ್ತದೆ. ಮಲ್ಟಿ ಪಾಯಿಂಟ್ ಸೇಕಡ ೩ ೧/೨ ರಷ್ಟಾದರೂ ಇವತ್ತಿನದಿವಸ ಇನ್‌ಫ್ಲೇಷನರಿ ಟೆಂಡೆನ್ಸಿಯಿಂದ ಪ್ರೈಸಸ್ ಜಾಸ್ತಿಯಾಗುತ್ತದೆ. ಸಾಮಾನ್ಯ ಬಳಕೆಯ ವಸ್ತುಗಳ ಮೇಲೆ ಬಹಳವಾಗಿ ಬೆಲೆ ಜಾಸ್ತಿಯಾಗುತ್ತಿದೆ.

ಶ್ರೀ ಎಂ. ವೈ. ಘೋರ್ಪಡೆ.—ನಾವು ಸೇಲ್ಸ್‌ಟ್ಯಾಕ್ಸ್ ಹಾಕುವ ಹಾಗೆ ನೇಬರಿಂಗ್ ಸ್ಟೇಟ್ಸ್‌ನಲ್ಲಿ ಏನಿದೆಯೆಂಬುದನ್ನು ನೋಡಿ.

ಶ್ರೀ ಎಂ. ಎಸ್. ಕೃಷ್ಣನ್.—ನೇಬರಿಂಗ್ ಸ್ಟೇಟ್ಸ್‌ನಲ್ಲಿ ಅಂದರೆ, ಮದ್ರಾಸಿನಲ್ಲಿ ಸೇಕಡ ೩ ರಷ್ಟು ಮಲ್ಟಿ ಪಾಯಿಂಟ್, ಕೇರಳಾದಲ್ಲಿ ಸೇಕಡ ೨ ರಷ್ಟು ಸಿಂಗಲ್ ಪಾಯಿಂಟ್, ಆಂಧ್ರದಲ್ಲಿ ಸೇಕಡ ೫ ರಷ್ಟು ಸಿಂಗಲ್ ಪಾಯಿಂಟ್ ಇದೆ.

SRI M. Y. GHORPADE.—The latest position 3½ per cent both in Kerala and Tamilnadu. Much water has flown.

ಶ್ರೀ ಎಂ. ಎಸ್. ಕೃಷ್ಣನ್.—ಭೂತಲಿಂಗಂ ಕಮಿಟಿ ಹೇಳಿಯದು. ಅದೇನು ಹೇಳುತ್ತದೆ? ನೋಡಿ. ನಿಮ್ಮ ಕಾಂಗ್ರೆಸ್ ಸರ್ಕಾರ ಎಲ್ಲಾ ಕಡೆಯೂ ಬಂದಮೇಲೆ ಸೇಕಡ ೩ ೧/೨ ರಷ್ಟು ಮಾಡುವುದಕ್ಕೆ ಶುರುಮಾಡಿದ್ದೀರಿ. ತಮಿಳುನಾಡಿನವರು ಬೇರೆ ರೀತಿಯಲ್ಲಿ ಮಾಡಿದ್ದಾರೆ. ಇದೇ ರೀತಿಯಲ್ಲಿ ಇನ್ನೂ ಕೆಲವು ಅಂಶಗಳಿವೆ. Chillies other than green chillies. It is a product used by all people.

ಇದರ ಮೇಲೆ ಸೇಕಡ ೩ ರಷ್ಟು ಇದೆ. ಎಲ್ಲಾ ಕಡೆಯೂ ಸೇಕಡ ೩ ರಷ್ಟು ಇದೆ. ಮತ್ತೆ ಏನಾದರು ಸ್ಟ್ಯಾಟಿಸ್ಟಿಕಲ್ ಫಿಗರ್ಸ್ ನೋಡಿ ಸೇಕಡ ೩ ೧/೨ ರಷ್ಟು ಮಾಡಿದರೂ ಬೇರೆ ಸ್ಟೇಟ್‌ಗಳಲ್ಲಿ ಯಾವ ರೀತಿ ಮಾಡಿದ್ದಾರೋ ಆ ರೀತಿ ಮಾಡಬೇಕೆಂದು ಇವರು ಇಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ರೆಡಿ ಮೇಡ್ ಗಾರ್ಮೆಂಟ್ಸಿಗೆ ನಮ್ಮಲ್ಲಿ ಸೇಕಡ ೨ ರಷ್ಟು ಸಿಂಗಲ್ ಪಾಯಿಂಟ್ ಇದೆ. ಇದರ ಬಗ್ಗೆ ತೆರಿಗೆಯನ್ನು ಹೆಚ್ಚಿಸಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಮಾಡುತ್ತಿದ್ದೀರಿ?

ಶ್ರೀ ಎಂ. ವೈ. ಘೋರ್ಪಡೆ.—ಇಲ್ಲ. ಅದು ಮಲ್ಟಿಪಾಯಿಂಟ್ ಬರುವುದಿಲ್ಲ. ಸಿಂಗಲ್ ಪಾಯಿಂಟ್ ಸೇಕಡ ೨ ರಷ್ಟಿದೆ. ಬಹಳವಾಗಿ ಲೊ ಸಿಂಗಲ್ ಪಾಯಿಂಟ್ ಮಲ್ಟಿಪಾಯಿಂಟಿಗೆ ಅನ್ವಯಿಸುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಈ ವಿಚಾರವನ್ನು ತಮ್ಮ ಗಮನಕ್ಕೆ ಏಕೆ ತೆಗೆದುಕೊಂಡು ಬಂದಿದ್ದೇನೆಂದರೆ, ಅದರಲ್ಲಿ ಒಂದು ವಿಷಯ ಆತಂಕವಾಗಿದೆಯೆಂದು ತೆಗೆದುಕೊಂಡು ಬಂದಿದ್ದೇನೆ. ಈ ರೀತಿ ಕೆಲವು ಸಾಮಗ್ರಿಗಳ ಮೇಲೆ ಸೇಕಡ ೩ ೧/೨ ರಷ್ಟು ಹಾಕಿದರೆ, ಅಂದರೆ ಅರ್ಧದಷ್ಟು ಜಾಸ್ತಿಯಾದರೂ ಬೆಲೆಗಳು ಎಷ್ಟೋ ಜಾಸ್ತಿಯಾಗುತ್ತಿದೆ ಇದರಿಂದ ನಿಮಗೆ ಒಳ್ಳೆಯ ಬೆಲೆಗಳು ಬರುತ್ತವೆ. ಆದಾಯವೂ ಬರುತ್ತದೆ. ಅವರ ಕಡೆಗೂ ಗಮನಕೊಡಬೇಕು. ಎಲ್ಲಾ ತೆರಿಗೆಗಳನ್ನು ನೋಡುವಾಗ ಒಂದೇ ರೀತಿಯ ಸ್ಟ್ರಕ್ಚರ್ ಇದ್ದಿದ್ದರೆ ಬಹಳ ಚೆನ್ನಾಗಿತ್ತು. ಅದನ್ನು ನೀವೂ ಒಪ್ಪಿಕೊಳ್ಳುತ್ತೀರಿ, ನಮಗೂ ಸಂತೋಷ ವಾಗುತ್ತದೆ ಬರೀ ಸೇಲ್ಸ್‌ಟ್ಯಾಕ್ಸ್ ಮತ್ತು ಬರೀ ಎಕ್ಸೈಜು ಡ್ಯೂಟಿಗಳನ್ನು ಜಾಸ್ತಿಮಾಡುವುದರಿಂದ ಅದು ಅಸಮರ್ಥತೆ ತೋರಿಸುತ್ತದೆಯೇ ಹೊರತು ಸಮರ್ಥತೆ ತೋರುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಎಕ್ಸೈಜು ಡ್ಯೂಟಿ ಸಂಸ್ಥಾನದ ಟ್ಯಾಕ್ಸ್ ಅಲ್ಲ. ಅದು ಕೇಂದ್ರ ಸರ್ಕಾರದ ಟ್ಯಾಕ್ಸ್.

SRI M. S. KRISHNAN.— I know it is not a good tax. There are various types of taxes. An assessment or study has got to be made in regard to these various types of indirect taxes. You must eliminate the indirect taxes and make then as direct taxes. You can use your good Offices in whatever that has to be in the interest of general public

ಇನ್ನೊಂದು ವಿಷಯ. ನೀವು ಇದರ ಬಗ್ಗೆ ಏನು ಮಾಡುತ್ತೀರಿ ಎಂಬುದನ್ನು ಇದರಲ್ಲಿ ನಮೂದು ಮಾಡಿಲ್ಲ. ಏನೋ ಆ ಕಡೆ ತೋರಿಸಿ ಈ ಕಡೆ ನೀವು ಸೇಲ್ಸ್‌ಟ್ಯಾಕ್ಸ್ ಹೆಚ್ಚಿಗೆ ವಸೂಲುಮಾಡಬೇಕೆಂದು ಹೋಗುತ್ತಾ ಇದ್ದೀರಿ. ಹೊಸದೇನೂ ನೀವು ಮಾಡುತ್ತಾ ಇಲ್ಲ. ಇದರಿಂದ ಇನ್ನಷ್ಟು ಮಾರಾಟ ತೆರಿಗೆ ಯನ್ನು ಜನಗಳ ಮೇಲೆ ಹೊರಿಸುವುದು ಆಗುತ್ತಾ ಇದೆ.

ಎರಡನೆಯದಾಗಿ, ತಾವು ಇದರಲ್ಲಿ ಮೂರು ತರಹ ವಸೂಲುಮಾಡುವುದಕ್ಕೆ ಅನುಕೂಲ ಇದೆಯೆಂದು ಹೇಳಿದ್ದೀರಿ. ಒಂದು ರೆವಿನ್ಯೂ ಅರಿಯರ್ಸ್, ಇನ್ನೊಂದು ಕೋರ್ಟಿಗೆ ಹೋಗಿ ಕಮರ್ಷಿಯಲ್ ಟ್ಯಾಕ್ಸ್ ಕೊಡತಕ್ಕವರಿಂದ ವಸೂಲುಮಾಡುವುದಕ್ಕೆ ಒಂದು ಅವಕಾಶ ಕೊಡುತ್ತೇವೆಂದು ಹೇಳಿದ್ದೀರಿ. ಅದರಲ್ಲಿ ಬೇಸಿಕ್ಕಾಗಿ ಇನ್ನೊಂದು ರೆವಿನ್ಯೂ ಇದೆ, ಅದನ್ನೂ ಸಹ ವಸೂಲುಮಾಡುವುದಕ್ಕೆ ಅವಕಾಶಮಾಡಿದ್ದೇವೆಂದು ಹೇಳಿದರೆ ಹೇಗೆ? ಇದರಲ್ಲಿ ಒಂದು ತರಹ ಬೇಸಿಕ್ ಪ್ರಿನ್ಸಿಪಲ್ಸ್ ಇಲ್ಲ. ತೊಂದರೆಗಳು ಇದರಿಂದ ಬರುವುದು ಸಹಜ. ಈಗಿರುವ ಹೆರಾಸ್‌ಮೆಂಟ್ ಬಹಳ ಜಾಸ್ತಿ ಇದೆ. ಮರ್ಚೆಂಟ್ಸ್, ಟ್ರೇಡರ್ಸ್, ಪೆಟ್ಟಿ ಷಾಪ್‌ಕೀಪರ್ಸ್, ಎಲ್ಲರೂ ಹಾಗೆಯೇ ಹೇಳುತ್ತಾರೆ. ಅವರ ಹೆರಾಸ್‌ಮೆಂಟನ್ನು ತಪ್ಪಿಸುವುದಕ್ಕೆ ನಿಮ್ಮ ಕೈಲಿ ಆಗುವುದಿಲ್ಲ. ಅಂಥಾದ್ದನ್ನು ಯಾವ ರೀತಿಯಲ್ಲಿ ತಪ್ಪಿಸುತ್ತೀರೋ ಗೊತ್ತಿಲ್ಲ. ಅದನ್ನು ಯೋಚನೆಮಾಡುತ್ತಾ ಇಲ್ಲ. ಇದರಿಂದ ಹೆರಾಸ್‌ಮೆಂಟ್ ಕಡಿಮೆಯಾಗುವುದಿಲ್ಲ. ಇನ್ನೂ ಜಾಸ್ತಿಯಾಗುತ್ತಾ ಇರುತ್ತದೆ. ಸೋರ್ಸ್ ಆಫ್ ಮೆಷಿನರಿ ಫಾರ್ ಕಲೆಕ್ಟಿಂಗ್ ಮಾಡಬೇಕು. ಆದರೆ ಅವರಿಂದ ಇನ್‌ಕ್ರೀಸ್ಡ್ ರೆವಿನ್ಯೂ ಎಷ್ಟು ಬರುತ್ತದೆ ಎಂಬುದು ನನಗೆ ಗೊತ್ತಿಲ್ಲ. ಏನು ಮಾಡಿದರೂ ಬರೀ ಅಂದಾಜು ಎಂದು ಹೇಳಬೇಕಾಗುತ್ತದೆ. ನಮ್ಮ ರಾಜ್ಯದೊಳಗೆ ನಮ್ಮ ದೇಶದಲ್ಲಿ ಪೋಲೀಸಿನವರು ಇದ್ದಾರೆ, ಹೋಂಗಾರ್ಡ್ಸ್, ಎನ್.ಸಿ. ಸಿಯವರು ಇದ್ದಾರೆ. ಎಲ್ಲರನ್ನೂ ಉಪಯೋಗಿಸುತ್ತಾರೆ. ಪೋಲೀಸಿನವರು ಬೇರೆ, ರಿಜರ್ವ್ ಪೋಲೀಸಿನವರು ಬೇರೆಯಾಗಿದ್ದರೂ ಕೆಲಸಬಿದ್ದಾಗ ಬರುತ್ತಾರೆ. ಹೋಂಗಾರ್ಡ್ಸ್ ಕೆಲಸಂದರ್ಭಗಳಲ್ಲಿ ಮಾತ್ರ ಬರುತ್ತಾರೆ. ಎನ್. ಸಿ. ಸಿ. ಯವರು ಸ್ಪೆಷಲ್ ಸರ್‌ಕಂಸ್ಟನ್ಸಸ್ಸಿನಲ್ಲಿ ಮಾತ್ರ ಬರುತ್ತಾರೆಂದು ನಾನು ವಿವರಣೆ ಕೊಡುತ್ತೇನೆ.

ಈ ತಮ್ಮ ವಿಧಾನಗಳೆಲ್ಲಾ ಜನರನ್ನು ಅಪ್ರೆಸ್ ಮಾಡುವುದಕ್ಕೆ ಇವೆಯೇ ವಿನಾ ಅವರ ಅನುಕೂಲ ಕ್ಕಾಗಿ ಇಲ್ಲ ಹಾಗಾಗದಂತೆ ನೋಡಿ ಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಸರ್ಕಾರಕ್ಕೆ ಬರತಕ್ಕ ವರಮಾನ ವನ್ನು ಕಡ್ಡಾಯವಾಗಿ ವಸೂಲ್ಮಾಡಬೇಕು ಎನ್ನುವುದರಲ್ಲಿ ನನ್ನ ಅಭ್ಯಂತರವಿಲ್ಲ. ಆದರೆ ಜನರಿಗೆ ಅದರಿಂದ ಒಂದು ಕಿರುಕುಳ ಇರಬಾರದು ಎಂದು ಹೇಳುತ್ತೇನೆ. ಇನ್ನು ತಾವೀಗ ಇಲ್ಲಿ ಅಪಲೇಟ್ ಅಥಾರಿಟಿ ಮತ್ತು ರಿವಿಜನ್ ಅಥಾರಿಟಿ ಇವರಿಬ್ಬರನ್ನೂ ಬೇರೆ ಬೇರೆ ಮಾಡಬೇಕೆಂದು ಮಾಡಿದ್ದೀರಿ.

ಶ್ರೀ ಎಂ. ವೈ. ಘೋರ್ಪಡೆ:—ಈ ಎರಡನ್ನೂ ಬೇರೆ ಬೇರೆ ಮಾಡಿದ್ದರಿಂದ ಇಲ್ಲಿ ಪದಗಳನ್ನು ಸ್ವಲ್ಪ ಬದಲಾವಣೆ ಮಾಡಬೇಕಾಯಿತು.

ಶ್ರೀ ಎಂ. ಎಸ್. ಕೃಷ್ಣನ್:—ಕೇವಲ ಪದಗಳ ಬದಲಾವಣೆಯಿಂದಲೇ ಫಲಿತಾಂಶ ಉತ್ತಮವಾಗ ಬಹುದೆಂದು ಆಶಿಸುವುದಕ್ಕಾಗುವುದಿಲ್ಲ. ಏಕೆಂದರೆ ಈ ದಿವಸ ಆ ರೆವಿನ್ಯೂ ಅಪಲೇಟ್ ಅಥಾರಿಟೀಸ್ ಮುಂದೆ ಎಷ್ಟು ಕಟ್ಟುಗಳು ಹಾಗೇ ಎಷ್ಟು ವರ್ಷಗಳಿಂದ ಕೊಳೆಯುತ್ತ ಬಿದ್ದಿವೆ ? ಇದರಿಂದ ಅನೇಕ ವ್ಯಾಪಾರಸ್ಥರಿಗೆ ತೊಂದರೆಯಾಗುತ್ತದೆ. ಆ ರೀತಿ ತೊಂದರೆಯಾಗದ ಹಾಗೆ ನೋಡಿಕೊಳ್ಳಬೇಕು. ಆದರೆ ಹಿಂದೆ ಇದ್ದುದಕ್ಕಿಂತ ಈ ಸರ್ಕಾರ ಒಂದು ಹೆಜ್ಜೆ ಮುಂದಿಟ್ಟಿದೆ. ಇಷ್ಟನ್ನು ಹೇಳಿ ನಾನು ನನ್ನ ಮಾತು ಗಳನ್ನು ಮುಗಿಸುತ್ತೇನೆ.

† ಶ್ರೀ ಗಟ್ಟಿ ಚಂದ್ರಶೇಖರ (ಗುಬ್ಬಿ):—ಮಾನ್ಯ ಅಧ್ಯಕ್ಷರೇ, ನಮ್ಮ ಅರ್ಥ ಮಂತ್ರಿಗಳು ತಂದಿರತಕ್ಕ ತಿದ್ದುಪಡಿಯನ್ನು ನಾನು ಅನುಮೋದಿಸುತ್ತೇನೆ. ನಾನು ಹಿಂದೆ ಕೂಡ ಮಾತನಾಡಿದಾಗ ಇದೇ ಸಭೆಯಲ್ಲಿ ಈ ಮಾರಾಟ ತೆರಿಗೆಯ ವಿಚಾರದಲ್ಲಿ ಅನೇಕ ಸಲಹೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದೆ. ಅವುಗಳನ್ನು ಇಂಪ್ಲಿ ಮೆಂಟ್ ಮಾಡುತ್ತಾರೆಯೋ ಇಲ್ಲವೋ ತಿಳಿಯಲಿಲ್ಲ. ನಾನು ಕೊಟ್ಟ ಸಲಹೆಗಳೇನಿದ್ದವು ಅವುಗಳೆಲ್ಲಾ ನನ್ನ ಸ್ವತಃ ಅನುಭವದ ಮೇಲೆ ಹೇಳಿದಂಥವುಗಳು ಈ ಮಾರಾಟ ತೆರಿಗೆಯ ಇಲಾಖೆ ಒಂದು ಅನ್ಯಾಯದ

(ಶ್ರೀ ಗಟ್ಟಿ ಚಂದ್ರಶೇಖರ್)

ಸುಂಕಗಳನ್ನು ಎತ್ತತಕ್ಕ ಒಂದು ಇಲಾಖೆ ಅನ್ನುವುದಾಗಿ ಜನರಲ್ಲಿ ಒಂದು ಭಾವನೆ ಬಂದುಹೋಗಿದೆ. ಹಳ್ಳಿಗಳಿಗೇನಾದರೂ ಈ ಸೇಲ್ಸ್‌ಟ್ಯಾಕ್ಸ್ ವಸೂಲ್ಮಾಡತಕ್ಕ ಅಧಿಕಾರಿಗಳು ಬಂದಗೆಂದರೆ ಆ ಮಕ್ಕಳು ಭೂತ ಪೀಡೆ ಪಿಶಾಚಿಗಳನ್ನು ನೋಡಿದರೆ ಹೇಗೆ ಹೆದರಿ ಓಡುತ್ತವೆಯೋ ಹಾಗೇ ಈ ವರ್ತಕರು ಈ ಅಧಿಕಾರಿಗಳು ಹಳ್ಳಿಗಳಿಗೆ ಬಂದರೆಂಬ ಸುದ್ದಿ ಮುಟ್ಟಿದ ಕೂಡಲೆ ಅವರು ತಮ್ಮ ಅಂಗಡಿಗಳನ್ನು ಬೀಗ ಹಾಕಿ ಓಡಿ ಹೋಗಿ ಮನೆಗಳಲ್ಲಿ ಬಚ್ಚಿಟ್ಟುಕೊಳ್ಳುತ್ತಿದ್ದಾರೆ. ಅಧಿಕಾರಿಗಳನ್ನು ಕಂಡರೆ ವರ್ತಕರು ಅಷ್ಟು ಭಯಪಡುತ್ತಾರೆ. ಇದಕ್ಕೆ ಕಾರಣ ಎಂದರೆ ಯಾರು ಈ ವ್ಯಾಪಾರವನ್ನು ಒಂದು ಸ್ವತಂತ್ರ ವೃತ್ತಿಯೆಂದು ತಿಳಿದು ಅದರಲ್ಲಿ ತಮ್ಮ ಜೀವನವನ್ನು ಸಾಗಿಸುವುದಕ್ಕೆ ಅವನ್ನು ಕೈಗೊಂಡಿರುತ್ತಾರೋ ಅಂತ ವರ್ತಕರನ್ನು ಇವರು ಮುತ್ತಿ ಅಲ್ಲಸಲ್ಲದ ತೊಂದರೆಯನ್ನು ಕೊಡುತ್ತಿರುವುದರಿಂದ ಅವರು ದಾರಿ ಬಿಟ್ಟು ಸುಳ್ಳು ಲೆಕ್ಕಗಳನ್ನು 'ರಾವಣನ ಲೆಕ್ಕ' ಮತ್ತು 'ಕೃಷ್ಣನ ಲೆಕ್ಕ' ಇಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಅವರಿಗೆ ಈ ಒಂದು ಪರಿಸ್ಥಿತಿ ಬಂದುದ್ದು ಯಾರಿಂದ ? ಈ ಇಲಾಖೆಯವರಿಂದಲ್ಲವೆ ? ಅಂತೂ ಈ ಆಫೀಸಿನಲ್ಲಿ ಲಂಚದ ಹಾವಳಿ ದಿನ ದಿನಕ್ಕೂ ಹೆಚ್ಚುತ್ತಿದೆ. ಸರ್ಕಾರದವರು ೨೫ ಸಾವಿರ ಬಂಡವಾಳದ ಒಳಗಡೆ ವ್ಯಾಪಾರಮಾಡತಕ್ಕವರು ಲೈಸೆನ್ಸ್ ಪಡೆಯಬೇಕಾದಿಲ್ಲ. ಎಂದು ಕಾನೂನು ಮಾಡಿದ್ದರೂ ಈ ಇಲಾಖೆ ಅಧಿಕಾರಿಗಳು ಅವರನ್ನು ಬಿಡುವಹಾಗಿಲ್ಲ. ಕೇವಲ ೮–೧೦ ಸಾವಿರದೊಳಗೆ ವ್ಯಾಪಾರ ಮಾಡತಕ್ಕವರನ್ನು ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದಾರೆ ಈಗ ನೀವು ದುಡ್ಡು ಕೊಟ್ಟು ಲೈಸೆನ್ಸ್ ಮಾಡಿಸಿಕೊಳ್ಳಿ, ಮುಂದೆ ನೋಡೋಣ ಎಂದು ಒತ್ತಾಯ ಮಾಡುತ್ತಿದ್ದಾರೆ. ವರ್ಷದ ಕೊನೆಯಲ್ಲಿ ಬಂದು ನೀವು ಅಷ್ಟು ಮಾಡಿದ್ದೀಯೇ ಇಷ್ಟು ಮಾಡಿದ್ದೀಯೇ ಎಂದು ಅವರನ್ನು ತೊಂದರೆ ಪಡಿಸುತ್ತಿದ್ದಾರೆ. ಹೀಗೆ ವರ್ತಕರನ್ನು ಹೆದರಿಸಿ ಒಬ್ಬೊಬ್ಬರಿಂದಲೂ ೨೦೦–೩೦೦ ರೂಪಾಯಿಗಳನ್ನು ಕಸಿದುಕೊಂಡು ಅವರಿಗೆ ಅಲ್ಲಸಲ್ಲದ ಹಿಂಸೆ ಕೊಡುತ್ತಿದ್ದಾರೆ. ಇದರಿಂದ ಧಾರಣೆವಾಸಿಗಳು ಏರುಪೇರಾಗುತ್ತವೆ. ವರ್ತಕರು ನಷ್ಟಕ್ಕೆ ಗುರಿಯಾಗತಕ್ಕ ಸಂದರ್ಭಗಳೂ ಇರುತ್ತವೆ. ಈ ನಾನಾ ತೊಂದರೆಗಳನ್ನು ತಪ್ಪಿಸುವುದಕ್ಕೆ ಸರ್ಕಾರದವರು ಸಾಧ್ಯವಾದ ಮಟ್ಟಿಗೂ ಎಲ್ಲೆಲ್ಲಿ ಈ ಮಲ್ಟಿಪಾಯಿಂಟ್ ತೆರಿಗೆಯನ್ನು ತಪ್ಪಿಸುವುದಕ್ಕೆ ಸಾಧ್ಯವಿದೆಯೋ ಅಲ್ಲೆಲ್ಲಾ ಇದನ್ನು ತಪ್ಪಿಸಿ ಅಲ್ಲಿ ಸಿಂಗಲ್ ಪಾಯಿಂಟ್ ತೆರಿಗೆಯನ್ನು ಜಾರಿಗೆ ತರಬೇಕೆಂದು ಒತ್ತಾಯ ಮಾಡುತ್ತೇನೆ. ಇದನ್ನು ಮಾಡದಿದ್ದರೆ ಸರ್ಕಾರದವರೇ ವರ್ತಕರಿಗೆ ಸುಳ್ಳು ಲೆಕ್ಕಗಳನ್ನು ಇಡುವುದಕ್ಕೆ ಪ್ರೇರೇಪಿಸಿದಂತಾಗುವುದಲ್ಲದೆ ದೇಶದಲ್ಲಿ ಲಂಚರುಷವತ್ತುಗಳು ಹೆಚ್ಚುವುದಕ್ಕೆ ಅವಕಾಶ ಮಾಡಿಕೊಟ್ಟಹಾಗೆ ಆಗುತ್ತದೆ. ಇದರಿಂದ ಕೊಳ್ಳತಕ್ಕ ಜನರಿಗೆ ವೃಥಾ ತೊಂದರೆ ಇನ್ನು ಕೆಲವು ಸಂದರ್ಭಗಳಲ್ಲಿ ಈ ಸೇಲ್ಸ್ ಟ್ಯಾಕ್ಸ್ ಇಲಾಖೆಯವರು ಮೂರು ತಿಂಗಳಿಗೊಮ್ಮೆ ಲೆಕ್ಕ ಒಪ್ಪಿಸಬೇಕೆಂದು ಇನ್‌ಸಿಸ್ಟ್ ಮಾಡುತ್ತಿದ್ದಾರೆ ಕೊಡದಿದ್ದರೆ ಒಂದು ಕಡೆ ಪೀನಲ್ ಇಂಟ್ರೆಸ್ಟನ್ನು ಹಾಕುವುದಲ್ಲದೆ ಪೆನಾಲ್ಟಿ ಬೇರೆ ವಿಧಿಸುತ್ತಿದ್ದಾರೆ. ಹೀಗೆ ಮೂರು ನಾಲ್ಕು ಸಾರ್ತಿ ದಂಡವ ಹಣವನ್ನು ವರ್ತಕರಿಂದ ವಸೂಲ್ಮಾಡುತ್ತಿದ್ದಾರೆ. ವರ್ತಕರಿಗೆ ಬಹಳ ತೊಂದರೆಯಾಗಿದೆ. ಇಂಥದೇ ಒಂದು ಸಂದರ್ಭದಲ್ಲಿ ನನಗೆ ಕಳೆದ ೮ ದಿನಗಳ ಹಿಂದೆ ಚಿಕ್ಕನಾಯಕನಹಳ್ಳಿಯಿಂದ ಒಂದು ಟೆಲಿಫೋನ್ ಮೆಸೇಜ್ ಬಂತು. ಅದರ ಸಾರಾಂಶವನ್ನು ನಾನೀಗ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಡೆಮಾಕ್ರೆಟಿಕ್ ಸೆಟಪ್‌ನಲ್ಲಿ ಸೇಲ್ಸ್ ಟ್ಯಾಕ್ ಇಲಾಖೆ ಕೆಲಸ ಮಾಡುತ್ತಿದ್ದರೂ ಇಂಥ ಈ ಸೇಲ್ಸ್ ಟ್ಯಾಕ್ಸ್ ಸ್ಕ್ವಾಡನ್ನು ಆ ಚಿಕ್ಕನಾಯಕನಹಳ್ಳಿಯಲ್ಲಿರತಕ್ಕ ಒಂದು ಮಾಬೋಕ್ರೆಟಿಕ್ ಸ್ಕ್ವಾಡ್ ಮುತ್ತಿಗೆ ಹಾಕಿ ಇವರಿಗೆ ಚೆನ್ನಾಗಿ ಥಳಿಸಿದ ಒಂದು ವಿಚಾರವನು ತಿಳಿಸಬೇಕಾಗಿದೆ. ಸೇಲ್ಸ್ ಟಾಕ್ಸ್ ಸ್ಕ್ವಾಡಿಗೆ ಸಂಬಂಧಪಟ್ಟ ೫–೬ ಜನ ಅಧಿಕಾರಿಗಳು ಶನಿವಾರ ಮತ್ತು ಭಾನುವಾರಗಳಲ್ಲಿ ಬೆಂಗಳೂರಲ್ಲಿ ನಡೆದ ರೇಸಿನಲ್ಲಿ ಜಾಕ್‌ಪಾಟನ್ನು ಹೊಡೆಯುತಕ್ಕ ರಭಸದಲ್ಲಿ ಕಳೆದುಕೊಂಡ ಹಣವನ್ನು ಸಂಪಾದನೆ ಮಾಡುವುದಕ್ಕೋ ಅಥವಾ ಮುಂದಿನ ವಾರದಲ್ಲಿ ನಡೆಯುತಕ್ಕ ರೇಸಿಗೆ ಹಾಜರಾಗತಕ್ಕ ಬಗ್ಗೆ ಬೇಕಾಗಿದ್ದ ಹಣದ ಅವಶ್ಯಕತೆಯಿಂದಲೋ ಚಿಕ್ಕನಾಯಕಹಳ್ಳಿಗೆ ಹೋಗಿ ಅವರು ಅಲ್ಲಿ ವರ್ತಕರಿಗೆ ಮುತ್ತಿಗೆ ಹಾಕಿ ಒಬ್ಬೊಬ್ಬ ವರ್ತಕರಿಂದಲೂ ೩೦೦–೪೦೦ ರೂಪಾಯಿಗಳನ್ನು ಕಿತ್ತಿದ್ದಲ್ಲದೆ ಅವರ ಮನೆಗಳಿಗೂ ಹೋಗಿ ಅಲ್ಲಿಯೂ ಚೆಕ್ ಮಾಡಬೇಕೆಂದು ಬಲವಂತ ಮಾಡಿದ್ದರಿಂದ ಅದಕ್ಕೆ ಹೆದರಿದ ವರ್ತಕರು ಮತ್ತೆ ಇನ್ನಷ್ಟು ಹಣ ಕೊಟ್ಟದ್ದರಿಂದ ಅವರು ಅಲ್ಲಿ ಸುಮಾರು ೧೨ ಸಾವಿರ ವಸೂಲ್ಮಾಡಿಕೊಂಡು ಇನ್ನೇನು ಬೆಂಗಳೂರಿಗೆ ಹೊರಡಬೇಕೆಂದು ಇರುವಾಗ ಅಲ್ಲಿ ಕಾದಿದ್ದ ಮಾಬೋಕ್ರೆಟಿಕ್ ಸ್ಕ್ವಾಡಿನವರು ಇವರ ಮೇಲೆ ಬಿದ್ದು ಚೆನ್ನಾಗಿ ಇವರನ್ನು ಥಳಿಸಿ ಇವರಲ್ಲಿದ್ದ ಹಣವನ್ನೆಲ್ಲ ಕಿತ್ತುಕೊಂಡು ಅವನ್ನು ಅವರು ಇಷ್ಟಿಷ್ಟೆಂದು ತಮ ತಮ್ಮಲ್ಲೇ ಹಂಚಿಕೊಂಡರಂತೆ ಈ ಅಧಿಕಾರಿಗಳು ಅಲ್ಲಿ ಏಟು ತಿಂದ ಬಗ್ಗೆ ಪೋಲಿಸಿನವರಿಗೇನೂ ಕಂಪ್ಲೆಂಟನ್ನು ಕೊಟ್ಟಿಲ್ಲ. ಅಂತೂ ಅಲ್ಲಿಂದ ಅವರು ಹೊಡೆತಾ ತಿಂದು ಓಡಿ ಬಂದಿದ್ದಾರೆ. ಈಗ ಅಲ್ಲಿ ಆದ ಲುಕ್ಸಾನನ್ನು ಸರಿಗಟ್ಟಿಕೊಳ್ಳಬೇಕೆಂದು ಮುಂದಿನವಾರ ತಿಪಟೂರಿಗೆ ಪ್ರೋಗ್ರಾಂ ಹಾಕಿಕೊಂಡಿದ್ದಾರಂತೆ. ಅವರಿಗೆ ಮುಂದಿನ ವಾರದ ರೇಸಿಗೆ ಹಣದ ಅಗತ್ಯ ವಿಪರೀತವಾಗಿರಬೇಕು. ನನಗೆ ಚಿಕ್ಕನಾಯಕನಹಳ್ಳಿಯಿಂದ ಅವರು ಬಂದಿದ್ದ ಬಸ್ ನಂಬರ್ ತಿಳಿಸುತ್ತೇವೆಂದು ಅಲ್ಲಿನವರು ಬರೆದಿದ್ದಾರೆ.

ಒಂದು ದಿವಸ ರೇಸ್ ನಡೆಯುವ ಸ್ಥಳಕ್ಕೆ ಹೋಗಿ ನೋಡಿ ಬಂದರೆ ಗೊತ್ತಾಗುವುದು, ಸಣ್ಣ ಗುಮಾಸ್ತೆಯಿಂದ ಹಿಡಿದು ದೊಡ್ಡ ಅಧಿಕಾರಿಯವರೆಗೆ ಎಲ್ಲರೂ ಅಲ್ಲಿಗೆ ಹೋಗುವರು. ಅನ್ಯಾಯದಿಂದ ಬರುವ ಹಣವನ್ನು ಅಲ್ಲಿ ಖರ್ಚು ಮಾಡುತ್ತಿದ್ದಾರೆ. ಸಾಯಂಕಾಲದಲ್ಲಿ ಕಂಟೋನ್ಮೆಂಟ್‌ನಲ್ಲಿ ಅಥವ ಟೌನ್‌ನಲ್ಲಿ ಮತ್ತಿತರ ಕಡೆಗಳಲ್ಲಿ ದಿವಸಕ್ಕೆ ಒಂದು ಸಾವಿರ ರೂಪಾಯಿ ಖರ್ಚು ಮಾಡುವ ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳೂ ಇದ್ದಾರೆ. ಬಡ ವರ್ತಕರನ್ನು ಹಿಂಸೆ ಮಾಡಿ ಅವರಿಂದ ವಸೂಲುಮಾಡಿ ಮನಸ್ಸಿಗೆ ಬಂದಂತೆ ಅದನ್ನು ಖರ್ಚುಮಾಡುತ್ತಿರುವ ಅಧಿಕಾರಿಗಳಿಂದ ಸರಕಾರಕ್ಕೆ ಕೆಟ್ಟ ಹೆಸರು ಬರುವುದು. ಇದನ್ನು ಗಮನಿಸಿ ಆದಷ್ಟು ಕಾನೂನನ್ನು ಸುಲಭ ರೀತಿಯಲ್ಲಿ ಮಾಡಿ ವರ್ತಕರಿಗೆ ಮತ್ತು ಸಣ್ಣಪುಟ್ಟ ಅಧಿಕಾರಿಗಳಿಗೆ ತೊಂದರೆಯಾಗದಂತೆ ಮಾಡಬೇಕು, ಸತ್ಯದಿಂದ ನಡೆದುಕೊಳ್ಳುವವರಿಗೆ ತೊಂದರೆ ತಪ್ಪಿಸಿ ಲಂಚದ ಹಾವಳಿ ತಡೆಗಟ್ಟಬೇಕು. ಹೀಗೆ ವ್ಯವಸ್ಥೆ ಮಾಡಲು ಯಾವುದಾದರೂ ಒಂದು ಸಮಿತಿ ಮಾಡಿ. ಕೇವಲ ಅಧಿಕಾರಿಗಳು ಸಮಿತಿಯಲ್ಲಿದ್ದರೆ ಸಾಲದು, ವರ್ತಕರು, ಅರಿತು ನುರಿತವರು ಮುಂತಾದವರ ಸಲಹೆ ಪಡೆದು ಸುಲಭ ರೀತಿಯಲ್ಲಿ ವರ್ತಕರಿಗೆ ತೊಂದರೆಯಾಗದ ರೀತಿಯಲ್ಲಿ ಮತ್ತು ಸರಕಾರಕ್ಕೆ ಹೆಚ್ಚು ಹಣ ಬರುವ ರೀತಿಯಲ್ಲಿ ಕಾನೂನನ್ನು ಬದಲಾಯಿಸಬೇಕು. ಚಿಕ್ಕನಾಯಕನಹಳ್ಳಿಯಿಂದ ಸಮಾಚಾರ ಬಂದ ತಕ್ಷಣ ಸರ್ಕಾರಕ್ಕೆ ವಿವರಗಳನ್ನು ತಿಳಿಸುತ್ತೇನೆ: ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ).—ಮಾನ್ಯ ಸಭಾಪತಿಗಳೇ, ಈ ಸೇಲ್ಸ್ ಟ್ಯಾಕ್ಸ್ ಅಮೆಂಡಮೆಂಟ್ ಬಿಲ್ಲಿನಮೇಲೆ ಶ್ರೀಮಾನ್ ಕೃಷ್ಣರವರು ಮಾತನಾಡುತ್ತಾ ಕೆಲವು ವಿಷಯಗಳನ್ನು ಹೇಳಿದ್ದಾರೆ. ಆದ್ದರಿಂದ ಹೆಚ್ಚು ಸಮಯ ನಾನು ತೆಗೆದುಕೊಳ್ಳದೆ ಜನರಲ್ಲಾಗಿ ಕೆಲವು ವಿಷಯಗಳನ್ನು ಅಧ್ಯಕ್ಷರ ಮೂಲಕ ಅರ್ಥ ಮಂತ್ರಿಗಳಿಗೆ ಸೂಚಿಸಬಯಸುತ್ತಿದ್ದೇನೆ. ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕದೆ, ಮಲ್ಟಿಪಾಯಿಂಟ್ ಟ್ಯಾಕ್ಸ್ ಹಾಕಿದರೆ ತೊಂದರೆಯಾಗುವುದು. ಇದನ್ನು ಮಾನ್ಯ ಸದಸ್ಯರು ಆಗಲೆ ಹೇಳಿದ್ದಾರೆ. ಪ್ರಾರಂಭದಲ್ಲೇ ತೆರಿಗೆ ಹಾಕಿದರೆ ವ್ಯಾಪಾರಸ್ಥರಿಗೆ, ಸಾಧಾರಣ ಜನರಿಗೆ ತೊಂದರೆಯಾಗುವುದಿಲ್ಲ. ಇದರಿಂದ ಸರಕಾರಕ್ಕೆ ರೊಕ್ಕವೂ ಬರುವುದು. ಆದುದರಿಂದ ಯಾವಾಗಲೂ ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಹಾಕಬೇಕೆಂದು ಅರ್ಥ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ. ಮಲ್ಟಿ ಪಾಯಿಂಟ್ ಟ್ಯಾಕ್ಸ್ ಹಾಕಲು ಸರ್ಕಾರದವರು ಪ್ರಯತ್ನ ಮಾಡಬಾರದು. ಅಧಿಕಾರಿಗಳನ್ನು ನಾನು ಟೀಕೆ ಮಾಡುವುದಿಲ್ಲ. ವರ್ತಕರು ಸಿಬ್ಬಂದಿ ಇಟ್ಟುಕೊಳ್ಳಲು ಸಾಧ್ಯವಿಲ್ಲ. ತಿಂಗಳಿಗೊಂದು ಸಲ ವರ್ತಕರು ಲೆಕ್ಕ ಕೊಡಬೇಕು. ಸರಕಾರಿ ಶಾಖೆ ತೆರಿಗೆ ವಸೂಲು ಮಾಡುವಾಗ ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು, ಹಾಗೆ ಮಾಡಲು ಆಗದಿದ್ದರೆ ಕಡಿಮೆ ತೊಂದರೆಯಾಗುವಂತೆ ಆದರೂ ವ್ಯವಸ್ಥೆ ಮಾಡುವುದು ಒಳ್ಳೆಯದು. ಅದು ಸರಕಾರದ ಕರ್ತವ್ಯ. ಮುಖ್ಯವಾಗಿ ಬಿಲ್‌ನಲ್ಲಿರುವಂತೆ ಐಷಾರಾಮು ವಸ್ತುಗಳೇನಿವೆ ಅವುಗಳ ಮೇಲೆ ಎಷ್ಟು ಬೇಕಾದರೂ ತೆರಿಗೆ ಹಾಕಬಹುದು, ಲಾಟರಿಯಿಂದ ಆದಾಯ ಪಡೆಯಬಹುದು. ಲಕ್ಶುರಿ ವಸ್ತುಗಳ ಮೇಲೆ ಎಷ್ಟು ತೆರಿಗೆ ಹಾಕಿದರೂ ಅಡ್ಡಿಯಿಲ್ಲ. ಸಾಮಾನ್ಯ ಮನುಷ್ಯರು ಉಪಯೋಗಮಾಡುವ ವಸ್ತುಗಳ ಮೇಲೆ ಅವು ನಿರ್ಮಾಣವಾಗುವ ಕಡೆ ಎಷ್ಟು ಬೇಕಾದರೂ ಹಾಕಬಹುದು, ಇದರಿಂದ ಅಧಿಕಾರಿಗಳಿಗೂ ತೊಂದರೆ ಕಡಮೆಯಾಗುವುದು. ಮುಖ್ಯವಾಗಿ ಸರಕಾರ ಸಂಗ್ರಹ ಮಾಡುವ ತೆರಿಗೆ ಸಾಮಾನ್ಯ ಮನುಷ್ಯರಿಗೆ ಉಪಯೋಗವಾಗಬೇಕು. ಅವರಿಗೆ ಬೇಕಾದ ನೀರಾವರಿ ಸೌಕರ್ಯ ಮುಂತಾದುವಕ್ಕೆ ಅದನ್ನು ಖರ್ಚು ಮಾಡಬೇಕು. ಕೆಲವರು ಅನೀತಿ ಜೀವನ ನಡೆಸುವುದು ಬೇಡ, ಲಕ್ಶುರಿ ವಸ್ತುಗಳ ಮೇಲೆ ಹೆಚ್ಚು ತೆರಿಗೆ ಹಾಕಿ ಬಡವರಿಗೆ ಅದು ಖರ್ಚಾಗುವಂತೆ ಮಾಡಿ. ತಿಂಗಳಿಗೊಮ್ಮೆ ಲೆಕ್ಕ ಕೊಡುವ ಏರ್ಪಾಡು ಸರಿಯಲ್ಲ, ೩ ತಿಂಗಳಿಗೊಂದು ಸಲವಾದರೂ ಲೆಕ್ಕ ಕೊಡುವಂತೆ ಮಾಡಬೇಕು, ನಮ್ಮಂಥವರಿಗೆ ಲೆಕ್ಕ ಕೊಡುವುದು ತಿಳಿಯುವುದಿಲ್ಲ, ಸಾಮಾನ್ಯ ಮನುಷ್ಯರಿಗೆ ತೆರಿಗೆ ಬೀಳುವುದು ಗೊತ್ತಾಗಬೇಕು. ಸರಕಾರಕ್ಕೆ ಹಣ ಬರಬೇಕೆಂಬುದು ಮುಖ್ಯ ಉದ್ದೇಶ. ಅದಕ್ಕೆ ತಕ್ಕಂತೆ ಲಕ್ಶುರಿ ವಸ್ತುಗಳ ಮೇಲೆ ಹೆಚ್ಚು ತೆರಿಗೆ ಹಾಕಿ, ಸಿಂಗಲ್ ಪಾಯಿಂಟ್ ಟ್ಯಾಕ್ಸ್ ವಿಧಿಸಿ, ಸಾಮಾನ್ಯ ಪ್ರಜೆಗೆ ತೊಂದರೆಯಾಗದಂತೆ, ಅವರ ಕಡೆ ಲಕ್ಷ್ಯವಿಟ್ಟು ಸೂಕ್ತ ಕ್ರಮ ಕೈಕೊಳ್ಳಬೇಕು, ಮಲ್ಟಿ ಪಾಯಿಂಟ್ ಟ್ಯಾಕ್ಸ್ ಹಾಕಬಾರದು, ಅನಿವಾರ್ಯವಾದ ಕಡೆ ಮಾತ್ರ ಮಲ್ಟಿ ಪಾಯಿಂಟ್ ಟ್ಯಾಕ್ಸ್ ಹಾಕಬಹುದು, ಹೀಗೆ ಮಾಡಬೇಕು ಎಂದು ಸರ್ಕಾರಕ್ಕೆ ಪ್ರಾರ್ಥನೆ ಮಾಡಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†SRI B. SUBBIAH SETTY (Surathkal).—Mr. Speaker Sir, at the outset, I wholeheartedly support this Bill. It has been said in the statement of objects and reasons that this Bill has been introduced to tighten the procedure regarding collections. This is *inter alia*.

(SRI B. SUBBIAH SETTY)

The main enemy of collection is evasion of tax. This evasion of tax, we say that it is generally done by the trader. I differ a little from that idea. It is the trader who is hand in glove with the corrupt official. Without the connivance of the official, it will be rather difficult for the trader to evade tax. This is my exprience as a person who also practices on the sales-tax side. This sales tax, as we know, we say the tax-payer is the trader, but the tax-payer is essentially the common man. It is really the common man's burden, because of the financial exigencies, the sales tax has to be paid and there is no other go. But we cannot see to day, as some member suggested that the amendment could be in the context of socialism.
Sales tax, submit, cannot be said to be a measure for any socialist step. It is collection of revenue in a purely capitalist society. That is regarding the allegation that these amendments are not in conformity with socialism.

4-00 P.M.

In this sales tax collection, the trader is only a collector—a collector of the hard—earned money of the common man who is prepared to give for the good of the society and for the running of the Government. And this trader becomes a trustee; essentially a trustee of the money collected on behalf of the Government. As a trustee, it is his duty to give this trust amount in tax to the Government. Supposing he does not do it, he is also punishable under the Indian-Penal Code, for breach of trust and for misappropriation of public funds. Therefore, I humbly suggest that a comprehensive amendment to Section 29 whereby the dishonest trader, along with the crrrupt official who conneved with him, could be charged under the I. P. C. for the offences of breach of trust and criminal misappropriation.

Now, in the collection of this amount als , I inted to give a suggestion for our inteeligent Finance Minister to chew. Today, we have what is known an Intelligence Wing. The Intellgence Wing which was established in 96`, is operating in the entire State. Also we have a Vigilance Squad. These Sections are with the present Sales Tax Department and that is its defect. When I was in this Vigilance Wing, I came across a funny story and I remember it now. An Officer of the Intellingence Bureau proceeded on leave. While applying for extension of leave, by Mistake, he addressed his superior as 'To the Intelligent Officer,' Pat came the reply: "You fool, don't you know that we do not have a single intelligent officer in the Intelligence Bureau." Even now it is the same thing with the Intelligence Wing of the Sales Tax Department. Tehrefore, I suggest that this Intelligence Wing or the Vigilnace Squad should be taken away from the purview of the Sales

Tax Department. Instead, our Finance Minister should form a Vigilance Squad directly under the Finance Minister. It should be answerable only to the Finance Minister. But I also caution the Finance Minister in this connection. If he is going to take that suggestion of mine, while taking the personnel for this Vigilance Squad, they should not be recruited from any personnel of existing Government Departments, leave alone the Sale Tax Department. No body should be taken to it on deputation also The staff for this Vigilance Squad should be recruited directly and selection made from bright young men knowing accounts. After recruitment they should be given suitable training and should be made answerable only to the Finance Minister and not to any body in the Sales Tax Department. Perhaps this directly recruited personnel may be able to enforce the Act strictly and detect where evasion takes place, Collusion between the trader and the Sales Tax Officers takes place because the S. T. Officers are not delinked form the Vigilance Squad. If the personnel of the Squad are drawn from this Sales Tax Department, it may so happen that the Sales tax Officer may be senior to the member of the Squad who is supposed to detect evasion and collusion. In such circumstances, it becomes embarrassing for the Squad staff to report against a senior officer; in which case, at a later stage there may be reparisals. Therefore, the Vigilance Squad must be directly under the Financ Minister and it must be delinked from the sales Tax Department. If the Vigilance Squad is reorganised on the lines suggested by me, we may be able to make a little headway in the detection of these sales tax offences.

Another thing I would like to bring to the notice of the Government is the plight of the small traders. The small taders are mostly illiterate people. Therefore, they cannot keep accounts according to the rules and as the Sale Taxs Department required them to be. Therefore, now- a - days what is happening is when account books are taken to the Sale Taxs Officers they are outright rejected and arbitrary assessmant is resorted to. Even the Bhootalingam Committee has not made any suggestion with regard to the maintenance of accounts by traders. I suggest that our Finance Ministry should apply its mind as to how best they could help the illiterate traders in the maintenance of their accounts. If they tell them what types of accounts are required by the Sales Tax Department and tell them precisely and make it known to them, it will be a great help to these traders, particalarly the small traders. The collection of revenue towards sales tax from these small traders is a very small amount. We are realising the bulk of revenue from the big traders Therefore, it is better we could think of simple accounts for maintenance by traders. This is very essential.

Another suggestion is regarding Sales Tax Practitioners. The Act says one could practise "as prescribed by the Rules." Certain Sales Tax Officers most probably desire to enter this lucrative profession after their retirement. According to Rules, those officers who have

(SRI SUBBIAH SETTY)

retired are eligible to practice as Sales Tax Practioners. My suggestion is that this should be discouraged. The permission granted should be deleted from the appropriate clause in the Rules and re ired officers should not be allowed to practise as Sales Tax Practioners

Another very small suggestion is regarding Clause 6- substitution of new Section for Section 15. In sub-clause (2) I feel that the first comma after 'tax' in line 1 is redundant and misleading. I suggest that it may be removed. Even thereafter, the following portion of the clause:

> "every person who was at the time of dissolution a partner of the firm and the legal representative of any such person who is deceased, shall be jointly and severally liable to pay the tax or penalty assessed or imposed."

is not happily worded. this might have been made a little more clear. This particular portion of the Clause is not happily worded.

With these submissions, I conclude.

The e have been several representations regarding item 72. In para 36 of the budget speech it is stated that the single point sales tax on motor vehicles, scooters, etc., chassis of motor vehicles and component parts of motor vehicles is being raised from 12 to 14 per cent. Not that I am opposed to it. I request the Finance Minister to clarify this point.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅಧ್ಯಕ್ಷರೇ, ಹಣಕಾಸಿನ ಸಚಿವರು ಇಟ್ಟಿರತಕ್ಕ ಮಾರಾಟ ತೆರಿಗೆ ತಿದ್ದುಪಡಿ ಕಾನೂನನ್ನು ಒಂದು ದೃಷ್ಟಿಯಿಂದ ನಾವು ಸ್ವಾಗತಿಸಬೇಕು. ಆದರೆ ಈ ಮಾರಾಟ ತೆರಿಗೆ ಕಾನೂನಿನಲ್ಲಿ ಕೇವಲ ಅಲ್ಲಿಂದಿಷ್ಟು, ಇಲ್ಲಿಂದಿಷ್ಟು ಮಾರ್ಪಾಡುಗಳನ್ನು ಮಾಡುವುದರ ಮುಖಾಂತರ ಅದಕ್ಕೆ ಹೊಸ ದೃಷ್ಟಿಕೋನವನ್ನು ಕೊಟ್ಟಂತಾಗುವುದಿಲ್ಲ. ಮೂಲಭೂತವಾಗಿ ಅದಕ್ಕೆ ಹೊಸ ಬೆಳಕನ್ನು ಚೆಲ್ಲುವುದು ಒಳ್ಳೆಯದು. ಈ ದೆಸೆಯಲ್ಲಿ ಸರ್ಕಾರಕ್ಕೆ ಭೂತಲಿಂಗಂ ಸಮಿತಿಯವರು ಒಂದು ಶಿಫಾರಸನ್ನು ಮಾಡಿದ್ದಾರೆ. ಇದರಲ್ಲಿ ಬಹಳ ಅತಂಕವಿರತಕ್ಕುದು ಸಣ್ಣಪುಟ್ಟ ಜನರಿಗೆ. ಜೊತೆಗೆ ಸ್ವಾತಂತ್ರ್ಯ ಬಂದು ೨೫ ವರ್ಷಗಳಾದರೂ ಕೂಡ ನಮ್ಮ ರಾಜ್ಯದಲ್ಲಿ ಹಾಗೂ ರಾಷ್ಟ್ರದಲ್ಲಿ ನಿಗದಿಯಾದ ತಾರೀಖಿಗೆ ಲೆಕ್ಕಪತ್ರಗಳನ್ನು ಪ್ರಾರಂಭ ಮಾಡುವುದು ಮತ್ತು ಪೂರ್ಣಗೊಳಿಸುವುದು ನಿಗದಿಯಾದ ತಾರೀಖಿಗೆ ಈಗಲೂ ಆಗುತ್ತಿಲ್ಲ. ಕೆಲವರು ದೀಪಾವಳಿಗೆ ಪೂರೈಸುತ್ತಾರೆ, ಕೆಲವರು ಡಿಸೆಂಬರ್ ತಿಂಗಳಿಗೆ ಪೂರೈಸುತ್ತಾರೆ, ಕೆಲವರು ಮಾರ್ಚಿ ತಿಂಗಳಿಗೆ ಪೂರೈಸುತ್ತಾರೆ. ನಾವು ಅದಕ್ಕೆ ನಿರ್ದಿಷ್ಟವಾದ ಒಂದು ತಾರೀಖನ್ನು ಗೊತ್ತು ಮಾಡಲೇಬೇಕು. ಅದಕ್ಕೆ ಏಕೆ ತಿದ್ದುಪಡಿಯನ್ನು ತರಲಿಲ್ಲವೆನ್ನುವುದು ಆಶ್ಚರ್ಯವಾಗುತ್ತಿದೆ. ಒಂದು ರಾಜ್ಯದಲ್ಲಿ ಒಂದು ವ್ಯವಸ್ಥೆಯನ್ನು ತರಬೇಕಾದರೆ ಜನರಿಗೆ ತೊಂದರೆಯಾಗಬಹುದು. ತೆರಿಗೆ ಬಗ್ಗೆ ಹಿಂದಿನಿಂದ ಅನುಸರಿಸಿಕೊಂಡು ಬಂದಿರತಕ್ಕ ನಾನಾ ರೀತಿಯ ಪದ್ಧತಿಯನ್ನು ಬಿಟ್ಟು, ಗೊತ್ತಾದ ತಾರೀಖಿನಿಂದ ಲೆಕ್ಕವನ್ನು ಪ್ರಾರಂಭ ಮಾಡುವುದು, ಗೊತ್ತಾದ ತಾರೀಖಿಗೆ ಲೆಕ್ಕವನ್ನು ಆಖೈರು ಗೊಳಿಸುವುದು ಒಳ್ಳೆಯದು ಇದನ್ನು ಮಾಡದಿದ್ದರೆ ತೊಂದರೆಯಾಗುತ್ತದೆ. ಇಡೀ ರಾಜ್ಯಕ್ಕೆ ಒಂದು ಸೂತ್ರವನ್ನು ನಾವು ಇಟ್ಟುಕೊಳ್ಳಬೇಕಾಗುತ್ತದೆ. ಹಾಗೆ ಮಾಡುವುದರಿಂದ ವರ್ಷದ ಆಖೈರಿಗೆ ಸರಿಯಾಗಿ ಎಲ್ಲರೂ ಸಕಾಲದಲ್ಲಿ ಲೆಕ್ಕ ಪತ್ರಗಳನ್ನು ಕೊಡುವುದಕ್ಕಾಗುತ್ತದೆ. ಮತ್ತು ಈ ಲೆಕ್ಕಪತ್ರವನ್ನು ಇಲಾಖೆಯವರು ಪರಿಶೀಲಿಸಿ ಆಖೈರು ತೀರ್ಮಾನ ಮಾಡಿ ಅಸೆಸ್‌ಮೆಂಟ್ ಕೂಡ ಜಾಗ್ರತೆಯಾಗಿ ಮಾಡಲು ಅನುಕೂಲವಾಗುತ್ತದೆ. ಇಂದು ಸಾವಿರಾರು ಕೇಸುಗಳು ಹಿಂದಿನವು ಇನ್ನೂ ಫೈಸಲಾಗದೆ ಇವೆ. ನಾನು ಸೂಚಿಸುವ ಬದಲಾವಣೆಗೆ ಒಂದು ಮುಖ್ಯವಾದ ಕಾರಣವೇನೆಂದರೆ, ಯಾವುದೋ ಒಂದು ವರ್ಷ,

ಆಖೈರಾಗಿ ಅಲ್ಲಿಂದ ಮೂರು ತಿಂಗಳು ಅಥವಾ ಆರೇ ತಿಂಗಳೊಳಗಾಗಿ ಅವರ ಲೆಕ್ಕಗಳೆಲ್ಲ ಪೂರ್ಣವಾಗಿ ಮುಂದಿನ ವರ್ಷ ಬರುವುದರೊಳಗಾಗಿ ಅವನು ಕೊಡತಕ್ಕ ಬಾಕಿ ಕೊಡುವುದಕ್ಕೆ ಅವಕಾಶವಿರಬೇಕು. ಒಂದು ಯುನಿಫಾರಂ ವರ್ಷವನ್ನು ಇಟ್ಟುಕೊಂಡರೆ ಲೆಕ್ಕಪತ್ರಗಳನ್ನು ಪೂರೈಸಿ ಅಸೆಸ್‌ಮೆಂಟ್ ಫಿಕ್ಸ್ ಮಾಡತಕ್ಕ ಅವಕಾಶವೇನಿದೆ, ಅದನ್ನು ಆರು ತಿಂಗಳಿಗೆ ಹೆಚ್ಚು ಯಾವತ್ತಿಗೂ ಇಡಬಾರದು. ಹಾಗೆ ಇಡುವುದರಿಂದ ಏನಾಗುತ್ತದೆ ಎಂದರೆ ಅನಾವಶ್ಯಕವಾಗಿ ವಸೂಲಿ ಮಾಡುವ ಕಾರ್ಯಕ್ರಮಕ್ಕೆ ಬಹಳ ತಡವಾಗುತ್ತದೆ. ತೆರಿಗೆ ಕೊಡುವವರಿಗೂ ನಿಮ್ಮ ಅಸೆಸಿಂಗ್ ಆಫೀಸರುಗಳು ಆದಷ್ಟು ಜಾಗತ್ರೆ ಕೊಡಬೇಕಾದ ತೆರಿಗೆಯ ಬಗ್ಗೆ ತೀರ್ಮಾನ ಮಾಡುವುದಕ್ಕಾಗುತ್ತದೆ

